ಅಪರಂಜಿ

ಸಂಪುಟ-೧ ಮಾರ್ಗಶಿರ-ಪುಷ್ಯ ಸಂಚಿಕೆ-೪



ಈ ಸಂಚಿಕೆಯ ಲೇಖಕರು

ಆನಂದ್

ಶಿವಕುಮಾರ್

ಟಿ.ಆರ್.ರಾಧಾಕೃಷ್ಣ

ಎ. ಆಶಾ

ರಾಮಸ್ವಾಮಿ

ಕರಟಕ (ದಾ.ದೀ.)

ರಾ.ಶಿ.

ಗವಾರ (ರಾಮಕೃಷ್ಣ)

ಬಿ.ಎಸ್. ಚಂದ್ರಶೇಖರ್

ಡಾ।ಕೆ. ಕೃಷ್ಣಮೂರ್ತಿ

ಪೀಪಿ

ಜೇಡಿ

ರಮ್ಯ

ಕೇಫ

ಗೋಪಾಲ್

ಮತ್ತಿತರರು

ಸಂಪಾದಕರು : ಆರ್. ಶೇಷಗಿರಿರಾವ್

ಅಪರಂಜಿ

ಗೌರವ ಸಲಹೆಗಾರರು
ಶ್ರೀ ರಾ.ಶಿ.
ಶ್ರೀ ಅ.ರಾ.ಸೇ.

ಪ್ರಕಾಶಕರು ಮತ್ತು ಸಂಪಾದಕರು
ಶ್ರೀ ಶೇಷಗಿರಿ

ವಾರ್ಷಿಕ ಚಂದಾ : ರೂ. 25-00

ಮುದ್ರಣ
ಬೃಂದಾವನ ಮುದ್ರಣ, ಜಯನಗರ, ಮೈಸೂರು-14

ಅಭಿಮಾನಿ ವಾಚಕ ವೃಂದದವರಿಗೆ ಹೊಸ ವರ್ಷದ

ಶುಭಾಶಯಗಳೊಂದಿಗೆ—

ಅಪರಂಜಿ

ಮನವಿ

ಕೊರವಂಜಿ, ಅಪರಂಜಿಯೊಡನೆ ನಾಡಿಗೆ ಬಂದಿದ್ದಾಳೆ, ಕೊರವಂಜಿ ಬಳಗದವರು, ಹೊಸ ಲೇಖಕರೊಂದಿಗೆ ನಿಮಗಾಗಿ ತಿಳಿನಗೆಯ ಹೊನಲನ್ನು ಹರಿಸುತ್ತಾರೆ. ಸದ್ಯಕ್ಕೆ ಚಂದಾದಾರರಿಗೆ ಮಾತ್ರ ಅಪರಂಜಿ ಲಭ್ಯ. ವಾರ್ಷಿಕ ಚಂದಾ ರೂ.25-00, ನೀವೂ, ನಿಮ್ಮ ಮಿತ್ರರೂ ಚಂದಾದಾರರಾಗಿರಿ, ಜಾಹಿರಾತು ಕೊಡಿ. ಲೇಖಕರೂ, ವ್ಯಂಗ್ಯ ಚಿತ್ರಕಾರರೂ ತಮ್ಮ ಕೃತಿಗಳನ್ನು ಕಳಿಸಿಕೊಡಲು ಪ್ರಾರ್ಥನೆ. ಅಪರಂಜಿ ನಿಮ್ಮದು. ಅದರ ಅಭಿವೃದ್ಧಿ ನಿಮಗೆ ಸೇರಿದ್ದು. ಚಂದಾ ಹಣವನ್ನು ಮನಿಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕಳಿಸಿಕೊಡಿ,

ಆರ್. ಶೇಷಗಿರಿರಾವ್
ದುರ್ಗಾಲಯ, ವಿ.ಪಿ. ವಿಸ್ತರಣ,
ಚಿತ್ರದುರ್ಗ-೫೭೭೫೦೧

ಮುದ್ರಣ ಯಂತ್ರದಲ್ಲಿ ತೊಂದರೆಯುಂಟಾಗಿ ಸಂಚಿಕೆ ತಡವಾಗಿ ನಿಮ್ಮ ಕೈಸೇರಿತು. ಇದಕ್ಕಾಗಿ ಕ್ಷಮೆ ಬೇಡುತ್ತೇವೆ. —ಸಂ

ಅಪರಂಜಿ

ಸಂಪುಟ-೧ ಮಾರ್ಗಶಿರ-ಪುಷ್ಯ ಸಂಚಿಕೆ-೪

ನಾನು ಲೋಕವನ್ನು ದಾಟುವಂತೆ ಭಗವಂತನು ಮಾಡಲಿ —ನಾರದ.

ಇನ್ನೊಂದು ಹೊಸ ವರುಷ ಬಂದಿದೆ. ಲೋಕಕ್ಕೆ ಹೊಸ ಹರುಷ ಬರಲಿ ಎಂದು ಅಪರಂಜಿ ಹಾರೈಸುತ್ತಾಳೆ.

ಜಗತ್ತನ್ನು ಪೀಡಿಸುತ್ತಿರುವ ಭಯ, ದ್ವೇಷ, ಯುದ್ಧ, ಬಡತನ, ರೋಗಗಳನ್ನು ನಿವಾರಿಸಲು ಹಲವರು ಹಲವು ಉಪಾಯಗಳನ್ನು ತೋರಿಸಿದ್ದಾರೆ. ಅಪಾಯ ಮಾತ್ರ ಹೆಚ್ಚುತ್ತಿದೆ. ಅಪಾಯ ನಿವಾರಣೆಯಾಗಲಿ ಎಂಬ ಸದಿಚ್ಛೆ ಅಪರಂಜಿಯದು.

ಲೇಖಕರು, ಚಂದಾದಾರರು, ಜಾಹೀರಾತುದಾರರು . . ., ಒಂದೇ ಮಾತಿನಲ್ಲಿ ಹೇಳುವುದಾದರೆ ಅಪರಂಜಿಯ ಬಳಗ ಹೆಚ್ಚಲಿ.

ಸಂಪಾದಕ (ಕಾರ್ಮಿಕ)

ಅಪರಂಜಿ ಕಿಡಿ

೧ 'ಬೆಂಗಳೂರು ದೂರವಾಣಿ' ಅನ್ನೋದನ್ನ 'ಬೆಂಗಳೂರು ದೂರುವಾಣಿ' ಅಂತ ಪ್ರಸ್ತುತ ಪರಿಸ್ಥಿತೀಲಿ ಕರೆಯೋದು ನ್ಯಾಯವಲ್ಲವೇ? ಎಂದು ಅಪರಂಜಿ ಬಳಗದವರು ಸೂಚಿಸಿದ್ದಾರೆ.

೨ ಅಲ್ಲಾರಿ, ಕೊರವಂಜಿ, ಕಾಡಿಂದ ಬರ್ತಾ ಅಪರಂಜಿ ಗಟ್ಟೀನ ಅಷ್ಟು ಬಹಿರಂಗವಾಗಿ ತರ್ತಾ ಇದಾಳಲ್ಲ; ಸರ್ಕಾರದವರು ನೋಡಿದ್ರೆ ಏನಂಗತಿ? ಎಂದು ನಮ್ಮ ಸ್ನೇಹಿತರೊಬ್ಬರು ಕಳಕಳಿಯಿಂದ ವಿಚಾರಿಸಿದ್ದಾರೆ.

೩ ಶಾಸಕರೊಬ್ಬರನ್ನು ಪಕ್ಷಾಂತರಗೊಳಿಸಲು ಎರಡು ಲಕ್ಷ ರೂಪಾಯಿ ಕೊಡಲಾಯಿತಂತೆ. (ಪಂಡಿತ್ ನೆಹ್ರು ಅವರ ಜನ್ಮದಿನದಂದು ದಿನಪತ್ರಿಕೆ ಸುದ್ದಿ) ಪಾಪ, ನೆಹ್ರು ಅವರು ಕೈಲಾಸದಲ್ಲಿ ಕಣ್ಣೀರು ಹಾಕುತ್ತಿದ್ದಾರೇನೋ !

೪ ಐದು ರೂಪಾಯಿಗೆ ನಗರದ ಬಸ್ಸುಗಳಲ್ಲಿ ದಿನವಿಡೀ ಪ್ರಯಾಣ—ಸುದ್ದಿ.

ಅದು ಸರಿ ಸ್ವಾಮಿ, ಆದರೆ ಮರುದಿನದ ಆಸ್ಪತ್ರೆ ಖರ್ಚು ?

೫ ರಾಜ್‌ಕುಮಾರ್ ಅಭಿಮಾನಿಗಳು ರಕ್ತದಾನಶಿಬಿರ ನಡೆಸಿದರಂತೆ, ಬೆಂಗಳೂರಿನಲ್ಲಿ. ಇದರಿಂದ ಪ್ರಯೋಜನ ಪಡೆದ ರೋಗಿಗಳೆಲ್ಲ ಕನ್ನಡ ಕಲಿಯಬೇಕು ಎಂಬ ಕಡ್ಡಾಯವೇನೂ ಇಲ್ಲವೋ ?

—ಆನಂದ್

ಬಳಗದ ಪ್ರತಿಕ್ರಿಯೆಗಳು

೧–ಅಪರಂಜಿಯ ಮೊದಲ ಸಂಚಿಕೆಗಿಂತ ಎರಡನೆಯದು ಚೆನ್ನಾಗಿದೆ, ಮೂರನೆಯದು ಇನ್ನೂ ಚೆಂದ. ನಾಲ್ಕನೆಯದು ಇನ್ನೂ ಉತ್ತಮವಾಗಿರುವುದರಲ್ಲಿ ಅನುಮಾನವೇ ಇಲ್ಲ.

—ಲ. ತೆ. ಬೆಂಗಳೂರು

೨–ಪದ್ಯ ಕಳಿಸಲು ಬರೆದಿದ್ದೀರಿ. ನಾನು ಮದುವೆಯಾಗಿ ಮಧುಚಂದ್ರಕ್ಕೆ ಹೈದರಾಬಾದಿಗೆ ಹೊರಟಿದ್ದೇನೆ.–

ಖುದ್ದೂಸ್ ಮಹಾಕವಿ, ಸಂ.ಶ.ಹಳ್ಳಿ
(ಒಳಿತಾಗಲಿ ಅಪರಂಜಿ)

೩–ಅಪರಂಜಿ ಬಂದಿದ್ದಾಳೆ, ಧನ್ಯವಾದಗಳು, ಇದೊಂದು ರಸದೂಟ. ನಾನು ಗೆಟಪ್ ಸಾಲದು ಎಂದಾಗ ನನ್ನ ಮಗಳು 'ಜೆಸ್ಟ್ ಗೆಟಿಂಗ್ ಅಪ್, ನೋ ಕಾಮೆಂಟ್ಸ್' ಎಂದಳು.

ಶ್ರೀ ಜಿ. ಎಸ್. ದೀಕ್ಷಿತ್,
ಹರಿಹರ

೪–ಶ್ರೀಗಳಾದ ಕೇ. ಫ., ರಾಮಿ, ದಾಶರಥಿ ದೀಕ್ಷಿತ್ ಇವರು ಓದುಗರ ಪ್ರತಿಕ್ರಿಯೆ ತಿಳಿಯಲು ಆಶಿಸುತ್ತಾರೆ.

೫- ಹತ್ತಾರು ಅಭಿಮಾನಿಗಳು ಅಪರಂಜಿ ಪೇಪರ್ ಸ್ಟಾಲ್‌ಗಳಲ್ಲಿ ಎಂದು ಕಾಣಿಸಿಕೊಳ್ಳುವಳು ಎಂದು ಕೇಳಿದ್ದಾರೆ.

ಶೀಘ್ರದಲ್ಲೇ ಎನ್ನುತ್ತಾರೆ ಪ್ರಕಾಶಕರು.

ಒಲುಮೆಯ ಕಾಣಿಕೆ

ನನ್ನ ದೋಸ್ತ್ ಸೊಗಸುಗಾರ ಶಾಮಿ
ಭೀಷ್ಮನೆಗಡಿಯ ಆಟಾಟೋಪಕ್ಕೆ
ತತ್ತರಿಸುತ್ತಾ, ಸಂತೋಷದಿಂದ ನುಡಿದ.
"ಕಂಡೆ ನಾನವಳನ್ನು ನಿನ್ನೆ ಬಸ್ಸಿನಲಿ
ಅಪ್ರತಿಮ ರೂಪವತಿ ನನ್ನ ಗೆಸ್ಸಿನಲಿ
ನಿಂತಿದ್ದೆ ಅವಳ ಸನಿಹದಲೆ ನಾನು
ಸವಿಯುತ್ತ ನಲ್ಮೊಗದ ಸೌಂದರ್ಯಭಾನು
ಕಾಲೇಜು ಸ್ಟಾಪಿನಲಿ ಬಸ್ಸಿಳಿವ ಮುನ್ನ
ಕೊಟ್ಟಳೀನೆಗಡಿಯನು ಓಹ್ ನಾನೆ ಧನ್ಯ.

—ಶಿವಕುಮಾರ್,

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ

ಗರಿಗರಿ, ಬಿಳುಪು, ಸುಕ್ಕಿಲ್ಲದಿಹ ಬಟ್ಟೆಯನು ತೊಟ್ಟು
ಮೋಹಕಮೀಸೆ, ನಗುವ ಝಳಪಿಸಿ ಹತ್ತು ರೂಪಾಯಿ ಹಾರಿಸಿದ
ಶಾಂತಣ್ಣ, ಹೆಂಡತಿಯ ಕಡುಪ್ರೀತಿಯಿಂದ ನರ್ಸಿಂಗ್ ಹೋಮ
ಗೆಳೆದೊಯ್ದು ಗಜಗರ್ಭ ಪ್ರಸವವನು ನೆವಮಾಡಿ ಇಪ್ಪತ್ತ
ನೆಗರಿಸಿದ ಕಾಂತಣ್ಣ, ಮಂತ್ರಿಗಳ ಒಳಗುಟ್ಟು, ಅಧಿಕಾರಿ
ಬಾಯಿಗಳ ಮುಚ್ಚಿಸುವ ಪಟ್ಟುಗಳ ಬಲ್ಲೆ ಟ್ರಾನ್ಸ್‌ಫರ್
ಪೂರು ಎಂದು, ಮುನ್ನೂರು ರೂಪಾಯಿ ಲಪಟಾಯಿಸಿದ
ಶಂಭು, ಹೊಸಕಾವ್ಯ ನವ್ಯಸೂಪರ್ ಪ್ರಗತಿ ಎಂದರಿಚಿ
ಪ್ರಿಂಟಿಸಲು ಮೂವತ್ತು ದೇಣಿಗೆಯ ಪಡೆದ ಕವಿ ದೇವಣ್ಣ
ಬಾಳು ಬರಿದುಡಿತ, ಹಾಳಲೆತ ಮೈ ಕೈ ನೋವು ಬ್ಯಾಂಕು
ಮೆಟ್ಟಿಲು ತುಳಿವ ಮುನ್ನವೇ ಕ್ಲೋಸಾಯ್ತು, ಬಾಳುಳಿಯೆ
ಐವತ್ತಗತ್ಯ ಕೊಡುವೆಯ ಎಂದು ಗಿಟ್ಟಿಸಿದ ಮಂಜಣ್ಣ.
ಹಾರಿದರು ಬಾನಾಡಿಯಂತೆ ಮರೆಯಾದರೋ ಗತವಸಂತದ
ಗುಲಾಬಿಗಳಂತೆ ಮನದಲ್ಲಿ ಬೀಡು ಬಿಟ್ಟವರರಿವರೆಲ್ಲ

—ಟಿ. ಆರ್. ರಾಧಾಕೃಷ್ಣ

ಚಿರಂತನ

ಹಿಂದೆ ಹಿಂಬಳ ಸುರಿಸುತ್ತಾ
ಮುಂದೆ ಮುಂದೆ ಸಾಗುತ್ತದೆ ಬಸವನಹುಳು
ಕಾಲ ಕಳೆದಂತೆ ಆ ಜೊಲ್ಲು
ಮಾಯವಾಗಿ ಬಿಡುತ್ತದೆ.
ರಾಹುಕೇತುಗಳ ದವಡೆಯಿಂದ
ಪಾರಾದ
ಸೂರ್ಯಚಂದ್ರರು
ಮುನ್ನುಗ್ಗುತ್ತಾರೆ
ಮತ್ತೊಂದು ಗ್ರಹಣಕ್ಕೆ
ಹಿಂದಿನ ಅನಾಹುತಗಳನ್ನೆಲ್ಲಾ
ಮರೆತು ಜನ
ಉತ್ಸಾಹದಿಂದ ಮುನ್ನುಗ್ಗುತ್ತಾರೆ
ಮತ್ತೊಂದು ಚುನಾವಣೆಗೆ

—ವಿ. ಆಶಾ

ನೆನಪು: ಕೊರವಂಜಿ ಕಾಲ

ನನ್ನ ಒಂದು ಲೇಖನಕ್ಕೆ- ಆಗ ಐದು ರೂಪಾಯಿಗಳನ್ನ, "ಅಲ್ಪವಾದರೂ ತುಂಬು ಹೃದಯದಿಂದ ಕಳಿಸಿದ್ದೇನೆ -ದಯ ಮಾಡಿ ಸ್ವೀಕರಿಸಿ" ಎಂದು ರಾಶಿಯವರು ಬರೆಯುತ್ತಿದ್ದರು. ಆಗ ಅದಕ್ಕೆ -೫೦ ಸೇರು ಅಕ್ಕಿ ಬರುತ್ತಿತ್ತು., ಅಂದರೆ ಇಂದಿನ ಸುಮಾರು 62-65 ಕಿ.ಜಿ.ಗೆ ಸಮ. ಈಗ ತರಂಗದಲ್ಲಿ ಬಂದ ಒಂದು ಲೇಖನಕ್ಕೆ ೪೦ ರೂಪಾಯಿಗಳನ್ನು ಕೊಟ್ಟರು. ಅದರಲ್ಲಿ ಹತ್ತುಕೆಜಿ ಅಕ್ಕಿಕೊಳ್ಳಲಾರೆವು. ಒಮ್ಮೊಮ್ಮೆ ಆ ಐದು ರೂಪಾಯಿಗಳನ್ನು ಆಗ ನಾವು ಪಡೆಯದೇ ಇದ್ದಿದ್ದಲ್ಲಿ ಕೊರವಂಜಿ ಏನಾದರೂ ಇನ್ನೂ ಸ್ವಲ್ಪಕಾಲ ಉಳಿಯುತ್ತಿದ್ದಳೇನೋ ಅನ್ನಿಸುತ್ತೆ.

ಅವರು ನಗೆ ಲೇಖನಗಳನ್ನು ಸೃಷ್ಟಿಸುತ್ತಿದ್ದ ರೀತಿ:—

ಪ್ರತಿ ತಿಂಗಳ ಮೊದಲ ಭಾನುವಾರ ರಾ. ಶಿ. ಅವರ ಮನೆಯಲ್ಲಿಒಂದು "ಕೂಟ." ಒಳ್ಳೆ ಉಪ್ಪಿಟ್ಟು - ಜೋಂಡ ಕೆಲವೊಮ್ಮೆ ಸಿಹಿ ವಗೈರಿ - ಏರ್ಪಾಡು.

ಅಲ್ಲಿ ನಾ ಕಸ್ತೂರಿ.,.ರಾ.ಶಿ. ಇವರುಗಳು ಹಿಂದಿನತಿಂಗಳ ಪ್ರಾಮುಖ್ಯ ಸಂಗತಿಗಳ ಬಗ್ಗೆ ತಮಾಷೆಯಾಗಿ ಮಾತನಾಡಿ. ಒಬ್ಬೊಬ್ಬರು ಒಂದೊಂದು ಸಂಗತಿ ಬಗ್ಗೆ ಲೇಖನದ ವಸ್ತುವಾಗಿ ತೆಗೆದುಕೊಳ್ಳುತ್ತಿದ್ದರು. ಆಗ ನಾವು- ಫುಟ್‌ಬಾಲ್ ಮೈದಾನದಲ್ಲಿ ಆಟ ಆಡುವ ಅತಿರಥ ಮಹಾರಥರು- ಚೆಂಡು ಒದ್ದದ್ದು ಹೊರಗೆ ಬಿದ್ದಾಗ - ಅದನ್ನು ಓಡಿ ಹೋಗಿ ತಂದುಕೊಟ್ಟು - ಆ ಆಟ ನೋಡುವ ಜನದಂತೆ ಇದ್ದೆವು, ಅನ್ನಬಹುದು.

ಒಮ್ಮೆ ಬೊಂಬಾಯಿಯಲ್ಲಿ ಒಬ್ಬ ವಜ್ರದ ವ್ಯಾಪಾರಿ ಅಂಗಡಿಗೆ ಒಬ್ಬ ಒಳ್ಳೆ ರೋಲ್ ರಾಯ್ಸ್ ಕಾರಿನಲ್ಲಿ ಬಂದಿಳಿದ. ಕಾರಿನ ಹಿಂಭಾಗಕ್ಕೆ ಫೋಮಾಬಟ್ಟೆ-ಈ ಯಜಮಾನನ ಕೈಲಿ ಒಂದುಸುಂದರವಾದ ಮಗು ಬಿಸ್ಕತ್ ತಿನ್ನುತ್ತಿತ್ತು. ಅದನ್ನು ಅಂಗಡಿಯಲ್ಲಿ ಕೂರಿಸಿ ಅನೇಕ ವಜ್ರಗಳ ಸರಗಳನ್ನ ಆಜಮಾಯಿಷಿ ಮಾಡಿ, ಕಡೆಗೆ ಎರಡು ಸರ ಆರಿಸಿ – ತನ್ನ ಹೆಂಡತಿಗೆ ತೋರಿಸಿಕೊಂಡು ಬರುವುದಾಗಿ ಹೇಳಿ ಕಾರಿನೊಳಗೆ ಹೋದ. ಮಗು ಅಂಗಡಿಯಲ್ಲೇ ಇತ್ತು. ಸ್ವಲ್ಪ ಹೊತ್ತಿನನಂತರ- ಅದು ಅಳಲು ಶುರು ಹಚ್ಚಿತು. ಯಜಮಾನ ಸೇವಕನನ್ನ ಕರೆದು ಆತನನ್ನು ಕರೆಯಲು ಹೇಳಿದ. ಕಾರಿನಹತ್ತಿರ ಹೋಗಿ ಬಡಿದರೂ ಸದ್ದಿಲ್ಲ. ಬಾಗಿಲು ತೆಗೆದರೆ ಈ ಕಡೆ ಇಂದ ಹತ್ತಿದವನು, ಆಕಡೆ ಇಂದ ಇಳಿದು ಹೊರಟುಹೋಗಿದ್ದ.

ಕಡೆಗೆ ಪೋಲೀಸರು ಬಂದುನೋಡಿ ವಿಚಾರಣೆ ಮಾಡಿದಾಗ ಮಗು ಯಾರದ್ದೊ ಕಾರು ಯಾರದ್ದೊ- ತಂದು ಈ ಹಾರಗಳ್ನ ಲಪ್ಟಾಯ್ಸಿ ಮಾಯವಾಗಿದ್ದ ಆತ !

ಇದು ಒಂದು ರಾಶಿಯವರು ಆರಿಸಿದ ಸಂಗತಿ ಲೇಖನಕ್ಕೆ. ಈ serious Subject

ನಮಗೇನಿದ್ದು humorous ಆಗಿ ಬರ್ಯೋದು ಎಂದು ನಾಗಸ್ವಾಮಿಯವರು ಕೇಳಿದರು.

"ಹೇಗಿದೆ ?"- ನೋಡುವೆಯಂತೆ ಎಂದು ಅವರೇ ಅದನ್ನ ತೆಗೆದುಕೊಂಡರು.

ಆ ತಿಂಗಳ ಮೂರನೇ ವಾರದಲ್ಲಿ ಬರೆದ ಲೇಖನವನ್ನ ಓದುವ ಹಾಡಿಕೆ, ಆಗ ಈ ಸಂಗತಿ – "ನವನಿಜ ಕ್ಷತ್ರಿಯ" ಎಂಬ ಲೇಖನವಾಗಿ ತಯಾರಾಗಿತ್ತು.

ಒಂದು ಹಜಾಮರ ಶಾಪಿಗೆ, ಒಬ್ಬ ದೊಡ್ಡವ, ಒಂದು ಸಣ್ಣ ಹುಡುಗ ಕ್ಷೌರಕ್ಕೆ ಬಂದರು. ಮೊದಲು ದೊಡ್ಡವ ಮಾಡಿಸಿಕೊಂಡ ನಂತರ, "ನೋಡಪ್ಪ ಇವ ಕ್ಷೌರ ಮಾಡಿಸಿಕೊಳ್ಳೋಕೆ ತಂಟೆ ಮಾಡ್ತಾನೆ. ತುಂಬಾ ಸಣ್ಣಗೆ - summer 'ಕ್ರಾಪ್' ಮಾಡು. ಇನ್ನು ನಾಲ್ಕು ತಿಂಗಳು ಅವನು ಕ್ಷೌರಮಾಡಿಸಿಕೊಳ್ಳದಿದ್ದರೂ ಪರ್ವಾಗಿಲ್ಲ." ಎಂದು ಹೇಳಿ – ಹುಡುಗನಿಗೆ "ಮಾಡಿಸಿಕೊಂಡು ಇಲ್ಲೇ ಇರೋ ಸ್ವಲ್ಪ ಸಾಬೂನು ತೊಗೊಂಡು ಬರ್ತೀನಿ ಅಂತ ಹೋದ. ಹುಡುಗನ ಕ್ಷೌರವಾಯ್ತು. ಅರ್ಧಘಂಟೆ ಆಯ್ತು, ಒಂದುಘಂಟೆ ಆಯ್ತು, ಆತ ಬರಲಿಲ್ಲ.

ಕ್ಷೌರಕ "ಎಲ್ಲೊ ನಿಮ್ಮಪ್ಪ ಬರ್ಲಿಲ್ಲ" ಎಂದರೆ, "ಅವ್ನ್ಯಾಕೆ ನಮ್ಮಪ್ಪ ಆಗ್ತಾನೆ, ದಾರೀಲಿ ಬರ್ತಿದ್ದೆ, ಯಾಕೊ ಇಷ್ಟುಕೂದ್ಲು ಬಿಟ್ಕೊಂಡಿದ್ದಿ, ಬಾ ಕ್ಷೌರಾ ಮಾಡ್ಸುತ್ತೀನಿ. ನೀನೇನು ದುಡ್ಡು ಕೊಡಬೇಡ ಅಂತ ಕರ್ಕೊಂಡ್ಬಂದು ಇಲ್ಲಿ ಬಿಟ್ಟು ಹೋಗಿದಾನೆ" ಎಂದಾಗ . . .?

"ನೋಡಿ ಸ್ವಾಮಿ ಈ ಇಬ್ಬರು ಸೇರಿ ನನಗೆ ಕ್ಷೌರ ಮಾಡಿದ್ದಾರೆ" ಎಂದು ಪರಿತಪಿಸಿದನಂತೆ ಆ ನಿಜಕ್ಷತ್ರಿಯ ? ಇದು ರಾಶಿಯವರು ನಗೆಹೊನಲು ಹರಿಸುತ್ತಿದ್ದ ರೀತಿ!

ಅಪರಂಜಿಗೆ ಸಲಹೆಗಾರರಾಗಿ ರಾಶಿಯವರಿದ್ದಾರೆ, ಆರಾಸೇಯವರಿದ್ದಾರೆ ಕೊರವಂಜಿ ಕಾಯುತ್ತಿದ್ದ 'ಅಪರಂಜಿ' ದೇವ ನಿಮಗೆ ದೊರಕಿದ್ದಾನೆ ಇಂದಮೇಲೆ . . . 'ನಗೆ' ಉಪಾಸಕರಿಗೆ ಇನ್ನು "ಹಬ್ಬ" ಬಂದಂತೆ ! ನಿಮ್ಮ ಮುಂದಿನಸಂಚಿಕೆ ಎದುರುನೋಡುವ

ನಿಮ್ಮ ಹಿತೈಷಿ

ರಾಮಸ್ವಾಮಿ

ಮಂತ್ರಿಗಳು ಸರ್ಕಾರದ ಸೇವಕರಲ್ಲ.

(ಚುನಾವಣೆ ಸಮಿತಿಯ ತೀರ್ಪು)

—ಅಂದಮೇಲೆ ಸರ್ಕಾರದ ರೀತಿ, ನಿಯಮಗಳಂತೆ ನಡೆಯಬೇಕಾಗಿಲ್ಲ.

— ಕೊರವಂಜಿ

ನಮ್ಮ ಅನೂಚಾನ ವೈದ್ಯಪದ್ಧತಿಗಳನ್ನು ಪ್ರಯೋಗಿಸುವವರಿಗೆ ಪ್ರಪಂಚದಲ್ಲಿ ಬಹಳ ಶತ್ರುಗಳಿದ್ದಾರೆ.

— (ಭಾಷಣ)

—ಪ್ರಪಂಚದಾಚೆ ಇನ್ನೂ ಅಧಿಕವಿದ್ದಾರೆ.

೧

ಮಾನ್ಯ ಡುಬ್ಬು ಚಿತ್ರ ಲೇಖಕರ ಸ॥ಕ್ಕೆ,

ತಾವು ನಮ್ಮ ಪತ್ರಿಕೆಗೆ ಕಳಿಸಿರುವ 'ಧಾರಾವಾಹಿ'ಯನ್ನು ಹಿಂದಿರುಗಿಸುತ್ತಿದ್ದೇವೆ. ಇದು ಚೆನ್ನಾಗಿಲ್ಲವೆಂದಲ್ಲ. ನೀವು ಇದಕ್ಕೂ ಪಸಂದ್ ಡಾಕು-ಥಾಕಿ-ಡಿಶ್ಕುಂ ಢಿಶ್ಕಿ ಕಾದಂಬರಿ ಬರೆಯಬಲ್ಲಿರಿ ಎಂದು ಬಲ್ಲೆವು. ನಮ್ಮ ಪತ್ರಿಕೆಧೋರಣೆ ಅನುಸರಿಸಿ ಬರೀರಿ. ನಮ್ಮಲ್ಲಿ ಸದ್ಯಕ್ಕೆ ಸಾಕಷ್ಟು ಸ್ಟಾಕ್ ಇರುವುದರಿಂದ ಸಧ್ಯಕ್ಕೇನೇನೂ ಕಳಿಸಬೇಡಿ.

ಇತಿ ಸಂ. ಕಿಶಾಪತಿ.

* * *

೨

ಎಲೈ ಕಿಶಾಪತಿ ಪತ್ರಿಕಾ ಸಂಪಾದಕನೆ—

ನಿನ್ನ ತಿಮಿರಿನ ಪತ್ರ ಕೈಸೇರಿದೆ. ನಿನ್ನ ಪತ್ರಿಕೆ ಮುಂಡಾಮೋಚ್ತು. ನಿನ್ನ ತಲೆ ಬೋಳಿಸ್ತು. ನಿನ್ನ ಅಗ್ರ ಲೇಖನ ಬರೆಯೋ ಕೈಯ್ಯಿ ಸೇದಿಹೋಗಲಿ. ಥೂ-ಥೂ ಥೂ. ಅಂಗಲಾಚಿಬೇಡಿ ತರಿಸಿಕೊಂಡ ಧಾರಾವಾಹಿ "ಪಕ್ಷಾಂತರ ಪಕ್ಷಿ" ಯನ್ನು ನನಗೇ ಪುನಃ ಹಾರಿಬಿಟ್ಟಿದ್ದೀಯ ಭಂಡ.

ನಿಜಕ್ಕೂ ನಿನ್ನ ಸಂಶಯ ನನಗೆ ತಿಳಿದಿದೆ. ಇದರಲ್ಲಿ ಮೂರನೇ ಅಧ್ಯಾಯದಲ್ಲಿ ಲಕ್ಕಪ್ಪನು ಎರಡು ಲಕ್ಷ ತೊಗೊಂಡು ಪಾರ್ಟಿಯಿಂದ ಹಾರಿ ಹೋಗಲು ಯತ್ನಿಸಿದಕೆ ಅವನ, ಎದುರು ಡಕಾಯಿತರ ತಂಡ ಅವನಿಗೆ ಮೂರುಲಕ್ಷ ತೋರಿಸಿ ಅದರ ಬಗ್ಗೆ ನಡೆದ ಮಾತುಕಥೆ ಟೇಪಿನಲ್ಲಿ ಹಿಡಿದಿಟ್ಟು ಇಡೀ ಪಕ್ಷವೇ ತಲ್ಲಣಿಸುವಂತೆ ಮಾಡಿದ್ದನ್ನು ನೀನು ಸಮರ್ಥಿಸಿದ್ದೀಯೆ. ಇದಕ್ಕೆ ನಿನಗೆಷ್ಟು ಕೊಟ್ಟರು ಬೊಗಳು.

ರಾತ್ರೊರಾತ್ರಿ ನೀನೂ ನಿನ್ನಪತ್ರಿಕೆಯೂ ಪಕ್ಷಾಂತರ ಮಾಡುವುದೆಂದು ಓಟಿಗರಾದ ಓದುಗರು ನಿರೀಕ್ಷಿಸಿರಲಿಲ್ಲ.

ಆಯ್ತು ಮಿಕ್ಕ ವಿಚಾರ ಎಂದರೆ 'ಪಕ್ಷಾಂತರ ಪಕ್ಷಿ' ಪ್ರಕಟವಾಗಲೇಬೇಕು. ನಿನ್ನ ಧೋರಣೆಗೆ ತಕ್ಕಂತೆ ತಿದ್ದಿ ಬರೆದರೆ ಎಷ್ಟು ಎಲ್ಲಿ ಕೊಡ್ತೀಯ. ಟೇಪ್‌ರಿಕಾರ್ಡರ್‌ಗೆ ಪ್ರವೇಶವಿಲ್ಲ. ಮೊತ್ತ ನಮೂದಿಸು-ಇಲ್ಲಿ ಎದುರು ಪಾರ್ಟಿಯು 10ಸಾವಿರ ರೆಡಿ ಇದೆ. ನಿನ್ನ ಆಫರ್ ಹೇಳು.

ಇತಿ ನಿನ್ನವ
ಗೋಸುಂಬಿ

೩

"ಮಾನ್ಯ ಮಹಿಳೆಯರೆ, ಮಹನೀಯರೆ, ಮಕ್ಕಳೇ, ಮತ್ತು ನಪುಂಸಕರೆ. . . ."

—ಎಂದು ಶ್ರೀ ಗೋಸುಂಬಿ ಅವರು ಭಾಷಣ ಪ್ರಾರಂಭಿಸಿದಾಗ ಸಭೆಯಿಂದ ಒಬ್ಬ ಕ್ರಾಂತಿ ಹುಡುಗ ಎದ್ದುನಿಂತ. ಎತ್ತರದ ಧ್ವನಿಯಲ್ಲಿ ಕೂಗಿದ.

"ಎಲೈ ಗೋಸುಂಬಿ -ಇದಕ್ಕೆ ನನ್ನ ಪ್ರತಿಭಟನೆ ಇದೆ. ತುಂಬಿದ ಸಭೆಯಲ್ಲಿ 'ನಪುಂಸಕರೆ' ಎಂಬ ಪ್ರಯೋಗ ಅಪ್ರಸ್ತುತ - ಅವಿವೇಕತನ ,, ಅವನು ಯಾರು ಹೇಳಿ ಮುಂದೆ ಭಾಷಣ ಮಾಡು, ಇಲ್ಲವೆ ನಾವೆಲ್ಲಾ ಸಭಾತ್ಯಾಗ ಮಾಡ್ತೇವೆ.

ಅದಕ್ಕೆ ಗೋಸುಂಬಿ ಪೆದರಿದನೆ. ಇಲ್ಲ, ಗಂಟಲು ಸರಿಮಾಡಿಕೊಂಡು "ಅಪ್ಪಾ ಹುಡುಗ ನಿನಗೆ ಯಾರು ಎಷ್ಟು ಕೊಟ್ಟು ನನ್ನ ಭಾಷಣಕ್ಕೆ ಅಡ್ಡಿ ತರಲಿಕ್ಕೆ ಹಚ್ಚಿದ್ದಾರೆ, ಹೇಳು. . . ."

"ಇಲ್ಲ ನನ್ನ ಗರ್ಲ್ ಫ್ರೆಂಡಿನ ಟೇಪಿಸಂಗೆ ನಾನು ಇದನ್ನ ಸ್ವಂತಿಕೆಯಿಂದ ಪ್ರತಿ ಭಟಿಸಿದ್ದು . . ."

–ಇಷ್ಟರಲ್ಲಿ ಹಳೇ ದೇಶಭಕ್ತರೊಬ್ಬರು ಕೋಲೂರಿ ಮೊಮ್ಮಗ್ಗಳ ಹೆಗಲ ಮೇಲೆ ಕೈ ಇರಿಸಿಕೊಂಡು ವೇದಿಕೆ ಹತ್ತಿದರು. ಅವರ ವಯಸ್ಸಿಗೆ ಮರ್ಯಾದೆ ಕೊಟ್ಟು ಸಭೆ ಶಾಂತವಾಯಿತು. ತೀರ ಅವರು ಮೈಕನ್ನು ವಶಪಡಿಸಿಕೊಂಡು,

"ಸಭಿಕರೇ - ಬಿಸಿ ರಕ್ತದ ಹುಡುಗರೆ ಈ ಗೋಸುಂಬಿ ಅವರು ಹೇಳಿದ್ದು ನಿಜ. ನಪುಂಸಕರೇ ಎಂದಾಗ ಅವರಿಗೆ ಅದು ಯಾರು ಎಂದು ಗೊತ್ತಿರಬೇಕು. ಅವರ ಭಾವ ಮೈದುನ ಪೋಸ್ಟಾಫೀಸಲ್ಲಿಕೆಲಸ ಅಲ್ಲವೇ. .. ಅವನು ನನಗೆ ಈ ಗೋಸುಂಬಿಯು ಪತ್ರಗಳ ಅಂದರೆ ಕಿತಾಪತಿ ಪತ್ರಿಕಾ ಸಂಪಾದಕನಿಗೆ ಬರೆದ ಪತ್ರಗಳ - ಪ್ರತಿ ನನ್ನ ಹತ್ರ ಇವೆ. ಅದಿರಲಿ, ಇಷ್ಟು ಧೈರ್ಯವಾಗಿ ಆತ 'ಸಭಿಕರನ್ನೂ ಕುರಿತು 'ನಪುಂಸಕರೇ' ಎಂದು ಅಂದದ್ದು ಸರಿ; ಆ ಬೃಹನ್ನಳೆ ಯಾರು ಅನ್ನಬಹುದು. ಆದರೆ ಪಾರ್ಥನಿಗೆ ಅವಮಾನ ಮಾಡಲಾರೆ- ಆದ್ದರಿಂದ ಆ ನಪುಂಸಕ ಈ ಗೋಸುಂಬಿಯೇ ಎಂದು ಘೋಷಿಸುತ್ತೇನೆ ಎಂದಾಗ ಕೇಕೆ ನಗು ನೂಕುನುಗ್ಗಲಾಗಿ ಲಾಠಿ ಪೋಲೀಸರು ಬಂದರು, ಲಾಠಿ ಬಾರಿಸಿ ಸಭೆ ಕರಗಿಸಿದರು.

ಈಗ ಗೋಸುಂಬಿ ಅವರು ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ-- ಕಾಲುಮೂಳೆ ಮುರಿದಿದೆಯಂತೆ. ಕಿತಾಪತಿ' ಪತ್ರಿಕೆಯಲ್ಲಿ ಅವರ ಬಗ್ಗೆ ಸಂಪಾದಕೀಯ ಬಂದಿದೆ.

ಕರಟಕ

ಹಾಲು ಮಾರಾಟಗಾರ ಚಿಲ್ಲರೆ ಹಾಲು ಮಾರಾಟ ನಿಲ್ಲಿಸಿ ಡಿಪೋಗೆ ಸಪ್ಲೈ ಕೊಡಲು ಪ್ರಾರಂಭಿಸಿದ. ಡಿಪೋದ ಮುಂದೆ ಹಸು ನಿಲ್ಲಿಸಿ, ಹಾಲು ಕರೆದ. ಹಸು 3ಲೀ ಹಾಲು ಕರೆಯಿತು. ಛೇ! ಮನೆಯಲ್ಲೇ ಹಾಲು ಕರೆದರೆ 6ಲೀಟರ್ ಕರೆಯುತ್ತದೆ ಡಿಪೋದ ಮುಂದೆ 3ಲೀ ಕರೆಯುತ್ತದೆ ಎಂದ ಹಾಲು ಮಾರಾಟಗಾರ. ಮರುದಿನ ಮನೆಯಲ್ಲೇ ಕರೆಯಲು ಡಿಪೋದವನು ತಿಳಿಸಿದ. ಹಾಲು ಕರೆಯುವ ವೇಳೆಗೆ ಕರೆಯುವಲ್ಲಿಗೆ ಡಿಪೋದವನು ಹೋದ. ಆಗಲೂ ಹಸು 3ಲೀ ಕರೆಯಿತು. ಡಿಪೋದವನು ಕೇಳಿದ "ಏನಯ್ಯಾ ಇಲ್ಲಿಯೂ 3ಲೀ ಹಾಲನ್ನೇ ಕರೆಯಿತಲ್ಲಾ." ಹಾಲು ಮಾರಾಟಗಾರ ಇಂದು ನಲ್ಲಿಯಲ್ಲಿ ನೀರು ಬಂದಿಲ್ಲ ಎನ್ನುವ ಬದಲು "ಈವತ್ತು ಹಸು ಮೇವು ತಿಂದಿಲ್ಲ" ಎಂದು ಉತ್ತರಿಸಿದ.

. . . .

ಗಂಡ : ನನಗೆ ಇನ್ನೊಂದು ಮಗುಬೇಕು,

ಹೆಂಡತಿ : ಆಗೋಲ್ಲರೀ ನನ್ನಿಂದಾಗಲ್ಲ.

ಗಂಡ : ಸಾಧ್ಯವೇ ಇಲ್ಲ. ನನಗಿನ್ನೊಂದು ಮಗು ಬೇಕೇ ಬೇಕು.

ಹೆಂಡತಿ : ಅಯ್ಯೊ, ಹೋದಸಾರಿ ನಾನು ಮಗು ಹೆತ್ತಿದ್ದೇನೆ. ಈಸಾರಿ ನೀವು ಹೆತ್ತಿಬಿಡಿ. ಪ್ರತಿಸಾರಿ ಹೆಂಗಸ್ರೇ ಹೆರೋ ರೂಲ್ಸಿದೆಯೆ?

ನನ್ನ ಮೊದಲ ಅನುಭವ

ಯಾರನ್ನಾದರೂ ಹತ್ತು ಹದಿನೈದು ವರ್ಷಗಳ ನಂತರ, ನಿನ್ನ ಮೊದಲ ಅನುಭವ ವನ್ನು ವಿವರಿಸು ಎಂದರೆ ಸ್ವಲ್ಪ ಕಷ್ಟವೇ ಆಗುತ್ತದೇ ಅನ್ನಿ. ತುಂಬಾ ಜ್ಞಾಪಕಶಕ್ತಿ ಇಲ್ಲವೇ ಊಹಾಶಕ್ತಿ ಇದ್ದೇ ಇರಬೇಕು, ಸವರ್ಣವಾಗಿ ವಿವರಿಸಬೇಕಾದರೆ. ಆದರೆ ನನಗೆ ಆ ಕಷ್ಟವಿಲ್ಲ. ಏಕೆಂದರೆ ನನ್ನ ಮೊದಲ ಅನುಭವ, ಇನ್ನೊಬ್ಬನ ಕೊನೆಯ ಅನುಭವ ಆಗಿತ್ತು. ಅವನ ಕೊನೆಯ ಅನುಭವವು ಅವನಿಗೆ ಅದೇ ಮೊದಲನೆಯ ಅನುಭವವೂ ಹೌದು. ಏಕೆಂದರೆ ಅದೇ ಅವನು ಮೊದಲು ಬಾರಿ 'ಹರೊ ಹರ' ಎಂದು ಕಣ್ಣು ಮುಚ್ಚಿಕೊಂಡಿದ್ದು, ಆದಿನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತಿದೆ. ಅಂದಮೇಲೆ ಅದನ್ನು ವಿವರಿಸುವುದು ಹೆಚ್ಚೇನೂ ಕಷ್ಟವಲ್ಲ, ಅನ್ನಿ.

—ಸುಮಾರು ವರ್ಷಗಳ ಹಿಂದಿನ ಮಾತು ಅನ್ನಿ- ಆ ವೇಳೆಗೆ ಕೇಳುವ, ಕೇಳಬಹು ದಾದ ನಿಮ್ಮಲ್ಲಿ ಅನೇಕರು ಇನ್ನೂ ನಿಮ್ಮ ತಂದೆಯರ ಮನಸ್ಸಿನಲ್ಲಿಯೇ ಮೂಡಿರದೇ ಇರುವಷ್ಟು ಹಿಂದಿನಕಾಲ. ಆಗತಾನೆ ನಾನು ವೈದ್ಯಕೀಯ ಪರೀಕ್ಷೆ ಕೊಟ್ಟು, ಸ್ವಲ್ಪಕಾಲ, ಆಸ್ಪತ್ರೆಯಲ್ಲಿ ಕೈ ಪಳಗಿಸಿಕೊಂಡು, ನನ್ನ ಸ್ವಂತ ಔಷಧಾಲಯವನ್ನು ಆರಂಭಿಸಿದ್ದೆ. ವೈಕುಂಠ ಚತುರ್ದಶಿಯ ಮಾರನೆಯ ದಿನ ನನ್ನ ದವಾಖಾನೆಯ ಆರಂಭೋತ್ಸವ ಅನ್ನಿ. ನನಗೂ ಆಮೇಲೆ ಅನ್ನಿಸಿತು. ಈ ದವಾಖಾನೆಯ ನನ್ನ ಸಮ ಆರಾಧನೆಗೂ ವೈಕುಂಠಕ್ಕೂ ಏನೊ ಗಂಟು ದೇವರು ಹಾಕಿಯೇ ಇದ್ದ ಎಂದು. ಆ ಪೇಟೆಯ ಜರಿಪೇಟದವರಿಗೆಲ್ಲಾ ಆಹ್ವಾನ ಕಳಿಸಿದ್ದೆ - ಮುಂದೆ ನಿಮಗೆ ತೊಂದರೆಯಾದರೆ, ಸೇವಕ ನಾನಿದ್ದೇನೆ ಎಂದು-

ಬೆಳಿಗ್ಗೆ ಶಾಸ್ತ್ರೋಕ್ತವಾಗಿ ದವಾಖಾನೆಯ ಪ್ರಾರಂಭೋತ್ಸವ ಆಯಿತು. ತೋರಣ ಕಂಡು ಸಾಕಷ್ಟು ಜನ ಬಂದಿದ್ದರು ಅನ್ನಿ. ತಕ್ಕಮಟ್ಟಿಗೆ ಗಂಜಾಗಂಪ್ಲಾಲು ಇತ್ತು. ಎಲ್ಲವೂ ಮುಗಿಯಿತು. ಸುಮಾರು ಒಂದು ಗಂಟೆಯ ಹೊತ್ತಿಗೆ. ಬಾಗಿಲು ಹಾಕಿ, ಬೀಗ ಬಿದ್ದಿದೆಯೋ ಇಲ್ಲವೋ ಎಂದು ಮೂರು ಮೂರುಭಾರಿ ಪರೀಕ್ಷಿಸಿ ಮನೆಗೆ ಹಿಂತಿರುಗಿದೆ.

ಗೋಧೂಳಿಕಾಲ, ಆರು ತಾಸಿನವೇಳೆಗೆ ತಿರುಗಿ ದವಾಖಾನೆಯ ಬಾಗಿಲುತೆರೆದು ಸಿದ್ಧವಾದೆ. ನನ್ನ ಸಮಾಜಸೇವೆಗೆ – ಕಂಡವರು ನನ್ನ ಉದರಕ್ಕೆ ಆಶ್ರಯಕೊಡಲೆಂದು ಕಾದುಕುಳಿತೆ. ಸುಮಾರು ಅರ್ಧಗಂಟೆ ಕಾದೆ. ನನ್ನ ಜವಾನನಿಗೆ ನನ್ನ ವಿಷಯದಲ್ಲಿ ನನ್ನ ವೈದ್ಯಕೀಯ ವಿಷಯದಲ್ಲಿ, ಅನುಮಾನ ಬರುವಷ್ಟು ಹೊತ್ತು ಕಾದೆ. ಕಡೆಗೆ ಒಬ್ಬ ಸುಮಾರು ವಯಸ್ಸಿನ, ಜರಿಪೇಟದವ— ನಾಲ್ಕುಉಂಗುರಧಾರಿಯೊಬ್ಬ, ಬೋರ್ಡ್ ನೋಡಿಕೊಂಡು ನೋಡಿಕೊಂಡು ಒಳಕ್ಕೆ ಬಂದ. ನನ್ನ ಮೊದಲ ಅನ್ನದಾತ ಇವನೇ ಎನ್ನುವ ಸಂಭ್ರಮ ನನಗೆ. ಏನೋ ದಾರಿ ತಪ್ಪಿ ಬಂದಿದ್ದಾನೆಯೇ ಎಂಬ ಅನುಮಾನ ಕೂಡ. ಆದರೂ ಒಳಗೆ ಬರುತ್ತಲೇ ಅವ ನನ್ನು ಎದುರು ಪೀಠದಲ್ಲಿ ಸವಿನಯವಾಗಿ

ಕುಳ್ಳಿರಿಸಿ, ಅವನ ಕೈ ಹಿಡಿದೆ, ನಾಡಿನೋಡಲಿಕ್ಕೆಂದು, ಆತ ತಾಗುಳ್ಳನಗೆ ಬೀರುತ್ತಾ ಕೈಹಿಂದಕ್ಕೆ ತೆಗೆದುಕೊಂಡ. 'ಕೈ ಹಿಡಿದು ನನ್ನನ್ನು ಉದ್ಧಾರಮಾಡು ಎಂದು ಇಂಗಿತವನ್ನಿಟ್ಟು ಅವನ ಕೈ ಹಿಡಿದರೆ, ಅವನು ರಭಾಡಿಸಿ ಕೈ ಹಿಂತಿರುಗಿಸಿ ಕೈಕೊಟ್ಟೇ ಬಿಟ್ಟ. ಓಹೋ ! ಇದು ಏಕೋ ಸರಿಯಿಲ್ಲ ಎಂದುಕೊಂಡು, "ಏನು ಯಜಮಾನರೆ, ಏನು ಬೇಕಾಗಿತ್ತು, ಎಂದು ಸವಿನಯದಿಂದ ಸವಿಧೇಯತೆಯಿಂದ ಸರಸದಿಂದ, ನನ್ನ ಕೇಶವನ್ನೂ ಸಹ ಕೈಯ್ಯಾಡಿಸುತ್ತಾ ಕೇಳಿದೆ ಆತ ಮೆಲ್ಲಗೆ ಉಸುರಿದ– 'ಡಾಕ್ಟರೇ ಎರಡು ವರ್ಷದಿಂದ ನನ್ನ ರೋಗ, ಇಪ್ಪತ್ತು ವರ್ಷದವ ಅವನಿಗೆ ಖಾಯಿಲೆ. ಊರಿನ ಎಲ್ಲಾ ವೈದ್ಯರೂ ಆಯಿತು. ಆಯುರ್ವೇದ ವಿಶಾರದರಾಯಿತು. ಮಂತ್ರ ತಂತ್ರಗಳಾಯ್ತು, ಏನೋ ಒಂದು ರೀತಿಯಿಂದಿದ್ದ. ನಿನ್ನೆ ಮೊನ್ನೆಯಿಂದ ಬಿಗಡಾಯಿಸಿಕೊಂಡಿದೆ. ನೀವು ಹೊಸದಾಗಿ ಓದಿ ಬಂದವರು. ಹುಮ್ಮಸ್ಸಿನಿಂದ ಕೆಲಸ ಮಾಡುವಿರೆಂದು ನನ್ನ ನಿರೀಕ್ಷಣೆ. ನೀವು ಬಂದು ಅವನನ್ನು ಪರೀಕ್ಷಿಸಿ ಏನು ಪ್ರಯೋಗ ತೋರಿದರೂ ಮಾಡಬಹುದು. ವಿಶಾಲವಾಗಿದ್ದೀರಿ. ಈಗಲೇ ಬನ್ನಿ; ನಾಳೆ ಶನಿವಾರ, ಹೊಸ ವೈದ್ಯ ಕೈ ಹಾಕಬಾರದು ಎಂದರು.

ಶಾಸ್ತ್ರ ನಕ್ಷತ್ರ ದಿನ ವಾರ ತಿಥಿ ಇವುಗಳಲ್ಲಿ ನನಗೂ ನಂಬಿಕೆ. ನೀವನ್ನಬಹುದು ಕಡೆಯುದರಲ್ಲಿ ನಿಮ್ಮ ಕೈ ಬಿದ್ದಮೇಲೆ ನಮಗೂ ನಂಬಿಕೆ ಎಂದು, ಒಪ್ಪುತ್ತೇನೆ ಅನ್ನಿ. ಅವನೊಡನೆ ಹೊರಟೆ. ಇಲ್ಲೇ ಹತ್ತಿರ ಮನೆ ಎಂದು ತನ್ನ ಕೈಯನ್ನು ಎದುರು ಆಲದ ಮರದ ಮೇಲಕ್ಕೆ ತೋರಿಸಿದ. ಸರಿ ಎಂದು ಅವನೊಡನೆ ನಡೆದೇ ಹೊರಟೆ. ಸುಮಾರು ಎರಡು ಮೈಲಿ ನಡೆದ ನಂತರ ಇಕೋ ಇದೇ ಸಂದಿಯಲ್ಲಿ ನಮ್ಮ ಮನೆ ಎಂದು ಒಂದು ಸಣ್ಣ ಸಂದೀನಲಿದ್ದ ಒಂದು ಮನೆಗೆ ಕರೆದೊಯ್ದ. ಬಾಗಿಲಲ್ಲೇ ಮೂರು ನಾಲ್ಕು ಜನ ಬೆಪ್ಪುಮೋರೆ ಹಾಕಿಕೊಂಡು ಕುಳಿತಿದ್ದರು. ಆಗಲೇ ನನಗೆ ಅನುಮಾನ. ಆದರೂ ಧೈರ್ಯವಾಗಿ ಅವನೊಡನೆ ಮನೆಯ ಒಳಕ್ಕೆ ಹೋದೆ. ಆತ ಒಮ್ಮೆ ರೋಗಿಯ ಕಡೆಗೆ ನೋಡಿ, ನನ್ನನ್ನೂ ನೋಡಿದ. ಜೋಲುಬಾಯಿ ಮಾಡಿಕೊಂಡು ನೋಡಿ ಡಾಕ್ಟರೇ ನಿಮ್ಮ ಕೈಲಿ ಏನಾಗುತ್ತೋ ನೋಡಿ ಎನ್ನುವ ಸೂಚನೆಯಿತ್ತ.

ನಾನೂ ರೋಗಿಯ ಪಕ್ಕದಲ್ಲಿ ಕುಳಿತೆ. ಅವನ ಪಾಣಿಗ್ರಹಣ ಮಾಡಿ ನಾಡಿ ನೋಡ ಉದ್ಯುಕ್ತನಾದೆ. ಅತಿ ವೇಗವಾಗಿ ನನ್ನ ಎದೆಯು ಹೊಡೆದುಕೊಳ್ಳುತ್ತಿದ್ದ ವೇಗದಿಂದಲೇ ಅವನ ನಾಡಿಯೂಹೊಡೆದುಕೊಳ್ಳುತ್ತಿತ್ತು. ಅವನಿಗೋ ಖಾಯಿಲೆ ನನಗೋ ಎನ್ನಿಸುವಂತಾಯ್ತು. ಆ ವೇಳೆಗೆ ಅವನ ಹಣೆಯೆಲ್ಲಾ ಬೆವರ ಹನಿಯಿಂದ ತುಂಬಿತು. ಅದನ್ನೂ ನೋಡಿದ ನನಗೂ ಹಾಗೇ ಆಯಿತು. ಆ ವೇಳೆಗೆ ಅವನ ಕೈ ಹಿಡಿದಿದ್ದ ನನಗೆ, ಅವನ ಕೈ ತಣ್ಣಗಾಗಿದ್ದುದು ಕಂಡು ಬಂತು. ಅವನ ಕೈಯ್ಯೋ ತಣ್ಣಗೆ, ನನದೋ ಎಂದು ಅನುಮಾನ ಕೂಡ ಬಂತು. ನನ್ನ ಬಲಗೈಯಿಂದ ಎಡಗೈ ಮುಟ್ಟಿ ನೋಡಿಕೊಂಡೆ,

ಅವನ ಕೈಯೇ ತಣ್ಣಗೆ ಎಂದು ನಿಖರ ವಾಯ್ತು. ಟೆಂಪರೇಚರ್ 150 ಓಹೋ ಇವನ ಕೆಲಸ ಮುಗಿಯುವ ಕಾಲ. ನಾನೆಲ್ಲಿ ಸಿಕ್ಕಿ ಹಾಕಿಕೊಂಡೆನಪ್ಪ. ಅದೂ ನನ್ನ ಮೊದಲ ರೋಗಿ ಎನ್ನಿಸಿತು. ನಾಲ್ಕುಂಗುರ ದವ ನನ್ನ ಮುಖವನ್ನು ನೋಡಿ ಧೈರ್ಯಕೊಟ್ಟ. ಡಾಕ್ಟರೇ ರೋಗಿ ಸುಸ್ತಾ ದಂತಿದೆ. ಬೇಗ ಏನಾದರೂ ಇಂಜಕ್ಷನ್ ಕೊಟ್ಟರೆ ಒಳ್ಳೆಯದಲ್ಲವೇ ಎಂದ. ಅವನೂ ಹೇಳಿದ್ದು ಸರಿಎಂದು ನನ್ನ ಕೈಚೀಲ ತೆಗೆದು ಒಂದು ಹೃದಯಕ್ಕೆ ಶಕ್ತಿ ಕೊಡುತ್ತದು ಹೆಸರಾಂತ ಕೋರ್‌ಮಿನ್ ಇಂಜಕ್ಷನ್ ಕೊಟ್ಟೆ. ಕೊಟ್ಟು ಎರಡು ನಿಮಿಷ ಬಿಟ್ಟು ನಾಡಿ ನೋಡುತ್ತೇನೆ ಅದೇ ಇಲ್ಲ. ಹೆಸರಾಂತ ಇಂಜಕ್ಷ್ ಹೆಸರು ಕೆಡಿಸಿ ಕೊಂಡಿತ್ತು. ಅವನ ಉಸಿರೂ ನಿಂತೇ ಹೋಯ್ತು. ತಿರುಗಿ ನಾಡಿ ನೋಡಿದೆ. ಏನೋ ಎಲ್ಲೋ ಪಟ ಪಟ ಹೊಡ ದಂತೆ ಭಾಸವಾಯಿತು. ನನ್ನ ಬೆರಳ ತುದಿಯು ನಾಡಿಯೋ ಹೊಡೆದಿರ ಬಹುದೇ ಎಂದು ಅನುಮಾನ. ತಿರುಗಿ ನೋಡಿದೆ. ಒಮ್ಮೆ ಇಲ್ಲ ಒಮ್ಮೆ ಇದೆಯೋ ಎನ್ನುವ ಅನುಮಾನ. ಉಸಿರೇನೋ ನಿಂತಂತೇ ಕಾಣುತ್ತೆ. ಯಾರೋ ಎಲ್ಲೋ ಕೇಳಿದಂತೆ ಆಯಿತು. 'ಯಾಕೆ ಡಾಕ್ಟರೇ ! ಮುಗಿದುಹೋಯ್ತೆ' ಅಂತ, ಸುಮ್ಮನೇ ಇದ್ದೆ. ಮಂಚದ ಆಕಡೆ ನಿಂತಿದ್ದ ಹೆಂಗ ಸೊಬ್ಬಳು - ಅಯ್ಯಯ್ಯೋ ಈಗ ಚೆನ್ನಾ ಗಿದ್ದರು. ಇವರ್ಸಿಜಕ್ಷ್ ಕೊಟ್ಟ. ಉಸಿರೇ ನಿಂತುಹೋಯ್ತು ಎಂದು ಬೋಲಬೋಲ ಬಸ್ಸಪ್ಪ ಎಂದು ರಾಗ ವಿಕಟ ರಾಗವಾಗಿ ಹೊಯ್ದುಕೊಳ್ಳಲಾರಂಭಿಸಿದಳು. ಒಂದೇ ಅರೆಕ್ಷಣ ಮನೆಯವರೆಲ್ಲಾ ಪಲ್ಲವಿ ಹಿಡಿದು ಬೋಲಭೋಲ ಮಾಡಿದರು. ಬೋಲ ಬೊಲೋದ ಸಂತೆ, ಹಿಂದೆಂದೂ ಕೇಳಿದ್ದಿಲ್ಲ ನಾನು. ಭೂಮ್ಯಾಕಾಶಗಳನ್ನು ತುಂಬಿದವು. ಭೂಮಿತಾಯಿಯು ಬಾಯಿ ಬಿಟ್ಟಿದ್ದರೆ ರೋಗಿಯ ಬದಲು ನಾನೇ ಅಲ್ಲಿ ಐಕ್ಯ ವಾಗಲು ಸಿದ್ಧನಾಗಿದ್ದೆ. ಮಧ್ಯೆಮಧ್ಯೆ ಒಂದೊಂದು ಧ್ವನಿ– ಇವನು ಇಂಜಕ್ಷನ್ ಕೊಟ್ಟ ಪ್ರಾಣಹೋಯ್ತು, ಪಾಪಿ, ಈ ಹುಡುಗನ ಕೈಲಿ ಕೊಲ್ಲಿಸಿದರಲ್ಲಪ್ಪಾ ! ಎಂಬ ಕೂಗು, ಕೋಮಲ ಕಂಠದಂತೆ, ಕನ್ನೆಯು ರದು, ಇದು ಕೇಳಬೇಕಾಗಿತ್ತು, ಕವಿಗಳು ಕರ್ಕಶ ಕರ್ಕನಾದದಂತೆ ನನಗೆ ಕೇಳಿಸಿತು. ಸುತ್ತಲೂ ಒಮ್ಮೆ ನೋಡಿದೆ. ಆಜಾನು ಬಾಹುಗಳು ಆರು ಜನ. ಅವರನ್ನೂ ಸವು ದಾಯಿಸುವಂತಹ ಇನ್ನಾರು ಜನ ಹತ್ತಾರು ಜನ ತಾಟಕಿಯರಂತೆ ಅರಚುತ್ತಿದ್ದ ನಮ್ಮ ಕವಿಗಳ "ಕೋಮಲ ಕಂಟೆ"ಯರು ಅಲ್ಲಿ ಸತ್ತವನ ಜೊತೆಗೆ ನನಗೂ ಎಲ್ಲಿ ಸಹಗಮನ ಮಾಡಿಸಿ ಬಿಡುತ್ತಾರೊ ಎಂಬ ಭೀತಿ ತಲೆ ದೋರಿತು. ಅದೇ ನನ್ನ ಜೀವ ಉಳಿಸುವು ದಕ್ಕೆ ಜೀವಾಳದಂತೆ ಆಯಿತು. ಯೋಚಿಸಿದೆ ಇವನು ಸತ್ತ ಎಂದು ಒಪ್ಪಿಕೊಂಡರೆ ನಾನಾ ತಲೆತಪ್ಪಿಸಿಕೊಳ್ಳುವುದು ಕಷ್ಟ. ಇವನಿನ್ನೂ ಬದುಕಿದ್ದಾನೆ. ಆಕ್ಸಿಜನ್ ತಂದು ಇವನ ಶ್ವಾಸಕೋಶ ತುಂಬಿದರೆ ಪ್ರಯೋಜನ ವುಂಟು ಎಂದು ಹೇಳಿ, ಆಕ್ಸಿಜನ್ ಹಿರಿಯಾಸ್ಪತ್ರೆಯ ಹಿರಿಯಾಧಿಕಾರಿ ತರು ತ್ತಾನೆ ಎಂದು ನೆಪಹೂಡುವುದೇ ಒಳ್ಳೆ ಯದು. ಅದೇ ಉಪಾಯ ಹೂಡಿದೆ.

ಆ ನಾಲ್ಕುಂಗುರದ ಮುದುಕ, ಪುನಃ

ನನ್ನನ್ನ ನಡೆಸಿದ ಮುಂದುಕವಿನು ಮಾಡಿದ. ಗೊತ್ತೆ. ಒಂದೇ ಕ್ಷಣದಲ್ಲಿ ಒಂದು ಮೋಟಾರು ತಂದು ನಿಲ್ಲಿಸಿದ. ನೆಟ್ಟಗೆ ಹಿರಿಯಾಸ್ಪತ್ರೆಗೆ ಹೋದೆವು ಅಲ್ಲಿನ ಹಿರಿಯ ವೈದ್ಯನಿಗೆ ನನ್ನ ಗೋಳು ಹೇಳಿಕೊಂಡೆ. ಅವನು ಅಭಯವನ್ನಿತ್ತು ನನ್ನ ಜೊತೆಯಲ್ಲೇ ಆಕ್ಸಿಜನ್ ಹಿಡಿದು ತಂದ. ಹೆಣಕ್ಕೆ ಆಕ್ಸಿಜನ್ ಕೊಟ್ಟ.

ಹಿಂತಿರುಗಿ ಹೋಗುವಾಗ ಹಿರಿಯರ ಬುದ್ಧಿವಾದ 'ರೋಗಿಯನ್ನ ದೇವರು ನೋಡಿಕೊಳ್ಳುತ್ತಾನೆ. ಅವನ ಸಂಬಂಧೀಕರನ್ನು ವೈದ್ಯನೋಡಿಕೊಳ್ಳಬೇಕು" ಅಂತ. ಅದು ಕ್ರಮೇಣ ಸ್ಥಿರವಾಯ್ತು ಅನ್ನಿ.

ರಾ.ಶಿ

ಅತ್ತೆಮ್ಮನ ವೃತ್ತಾಂತ

ಒಂದೂರು, ಆ ಊರಲ್ಲಿ ಒಂದು ದೊಡ್ಡ ಕುಟುಂಬ. ಆ ಕುಟುಂಬದಲ್ಲಿ ಒಬ್ಬ ಅತ್ತೆ.

ಅತ್ತೆಯೋ ಬಲು ಘಟಾಣಿ. ಆದ್ದರಿಂದ ಆಕೆಯನ್ನೇ ಕುಟುಂಬ ನಡೆಸೋದಕ್ಕೆ ಬಿಟ್ಟು ಉಳಿದ ಗಂಡಸರು, ಹೆಂಗಸರು, ಮಕ್ಕಳು, ಮರಿ ಕವಳ ಕತ್ತರಿಸಿಕೊಂಡು ಕಿತ್ತಾಡಿ ಕೊಂಡು ಇದ್ದರು. ಅತ್ತೆ ನಕ್ಕರೆ ತಾವೂ ನಗೋದು, ಅತ್ತೆ ರೇಗಿದರೆ ಬಾಯಿ ಬಿತ್ತಿ ಕೊಳ್ಳುವುದು ಅಥವಾ ಆಕೆಯ ಬೆನ್ನ ಹಿಂದೆ ವಟವಟ ಅನ್ನುವುದು ಮಾಮೂಲಾಗಿತ್ತು.

ಅಡಿಗೆ ಹ್ಯಾಗೆ ಏನು ಅಂತ ಆಜ್ಞೆಮಾಡ ಬೇಕು ಅತ್ತೆ, ದೇವರ ಪೂಜೆಗೂ ಅತ್ತೆ, ಹಣಕಾಸಿನ ಉಸಾಬರಿಯೂ ಅತ್ತೆಗೆ ಕಾಯಿಲೆ ಬಿದ್ದರೆ ಅಥವಾ ಏನಾದರೂ ಗಂಡಾಂತರ ಒದಗಿದರೆ ಓಡಾಡಬೇಕು ಅತ್ತೆ. ಮನೆಯ ಪ್ರತಿಯೊಂದು ಕೆಲಸಕ್ಕೂ ಅತ್ತೆ ಕೈ ಹಾಕದ ಕೆಲಸ ಮುಂದೆ ಹೋಗದು. ಯಾವ ಸಮಸ್ಯೆಗೂ ಆಕೆಯಿಂದೇ ಪರಿಹಾರ. ಆಕೆಯನ್ನು ಬಿಟ್ಟು, ಅಥವಾ ಆಕೆಯ ಇಚ್ಛೆಗೆ ವಿರುದ್ಧವಾಗಿ ಯಾರಾದರೂ ಏನಾದರೂ ಮಾಡಿದರೆ ಕೆಲಸ ಕೆಟ್ಟಂತೆಯೇ. ಇದ್ದಕ್ಕಿದ್ದಂತೆ ಏನೇನೋ ಆಗಿ ಹೋಗುತ್ತದೆ.

ಇಂಥ ಜವಾಬ್ದಾರಿಯ ಹೊರೆ, ಅದರಲ್ಲಿಯೂ ಅಷ್ಟು ದೊಡ್ಡ ಕುಟುಂಬದ್ದು ಹೊರೋದು ಅತ್ತೆಗೆ ಸಾಧ್ಯವೆ, ಆಕೆಗೆಸಾಕು

ಸಾಕಾಗಿ ಹೋಗೋದಿಲ್ಲವೇ ? ಜವಾಬ್ದಾರಿಯನ್ನು ಹುಡುಕಿ ಹಾಕಿದರೆ ವಾಸಿಯಲ್ಲವೇ ? ಅಂತ ಒಬ್ಬಿಬ್ಬರು ಆಗಾಗ ನಾಲಿಗೆ ಉದ್ದ ಮಾಡುವುದುಂಟು. ಆದರೆ ಅತ್ತೆಗೆ ಅಂಥ ಮಾತೆಲ್ಲ ಆಗದು. ತಾನಿದ್ದರೆ ಕುಟುಂಬ ಪ್ರೇಟು, ತನ್ನ ಬಿಟ್ಟರೆ ಕಟ್ಟರು, ಏನು ಬಂದರೂ ನಿಭಾಯಿಸಿಕೊಳ್ಳುತ್ತೇನೆ, ಎಂಬ ಛಾತಿ ಆಕೇದು ತನ್ನನ್ನು 'ಹೈಕಮಾಂಡ್' ಅಂದರೂ ಅದೊಂದು ಭಾರೀ ಬಿರುದು ಅಂತ ಖುಷಿ. ಇಲ್ಲಿ ನೆಗೆದೋಡಿದರೂ ಹೀಗಾಯ್ತು ಅಂತ ವರದಿ ಮಾಡೋದಕ್ಕೆ ಅತ್ತೆತಾವ ಓಡಿಬರೋದು ಮಾಮೂಲು. ಅತ್ತೆಗೂ ಅದೇ ಖುಷಿ. ಆದರೂ ವಯಸ್ಸು ಅನ್ನೋದಿದೆಯಲ್ಲ, ಇಳಿ ವಯಸ್ಸು ಪ್ರಾಪ್ತವಾದಹಾಗೆಲ್ಲ ಅತ್ತೆಗೆ ಏನೋ ಒಂದು ತರಹ ಆಗುತ್ತೆ. ಕೈ ನಡುಕವಿಲ್ಲದಿದ್ದರೂ ಒಳಗಡೆ ಏನೋ ನಡುಕ ಹುಟ್ಟಿದಂತೆ ಭಾಸವಾಗ್ತದೆ. ಕುಟುಂಬದೊಳಗಿನ ತಂಟೆ ತಿಸ್ರಗಳು ಬರಬರುತ್ತ ಜಾಸ್ತಿಯಾಗ್ತಾ ಇವೆ. ಅವಕ್ಕೆಲ್ಲ ಕೂಡಲೆ ಗಮನ ಕೊಡೋದಕ್ಕೆ ಸಾಧ್ಯವಾಗ್ತಾ ಇಲ್ಲ. ಹಾಳು ಮೂಳುಜಾಸ್ತಿ. ಸ್ವಲ್ಪ ಸಮಯ ಬಿಟ್ಟು ನೋಡೋಣ ಬಿಟ್ಟು ನೋಡೋಣ ಅಂತ ಪರಿಹಾರ ಮುಂದಕ್ಕೆ ಹಾಕ್ತಾ ಬಂದು ಎಲ್ಲಾ ಜಿಗುಟೇ ಜಿಗುಟು. ಮನಸ್ಸಿದ್ದರೂ ಕಾಯ ಕೇಳೊಲ್ಲವೋ ಏನೋ ಗೊತ್ತಿಲ್ಲ. ಅತ್ತೆಮ್ಮನ ನಂತರ ಏನು ಎಂಬ ಯೋಚನೆ ಕೂಡಾ ಇಲ್ಲ ಕುಟುಂಬದವರಿಗೆ ಅಥವಾ, ಅತ್ತೆಮ್ಮನದೇ ಆದ ಏನಾದರೂ ಆಗುತ್ತೆ ಎಂಬ ಮಂತ್ರವನ್ನೇ ಅವರೂ ಗಟ್ಟಿ ಹಿಡಿದರೊ !

ಅತ್ತೆಮ್ಮನ್ನ ಮೂಲೆಗೆ ಕೂರಿಸಿ ತಾವೇ ಕುಟುಂಬ ನಡೆಸ್ತೀವಿ ಅಂತ ಎಗರಾಡಿದ ಅಸಾಮಿಗಳೋ ತಾವೇ ಅಂಗಳದ ಮೂಸೆಯಲ್ಲಿ ತಮ್ಮ ತಮ್ಮೊಳಗೆ ಕಿತ್ತಾಡೋದರಲ್ಲಿ ಮಗ್ನ.

ಮೊನ್ನೆ ಯಾತಕ್ಕೊ ಅತ್ತೆಮ್ಮ ಕುಂಬರೇಗಿದ್ದರು. ನಾನೊಬ್ಬಳೇ ಎಷ್ಟಂತ ಬಿದ್ದಾಡೋದು, ನೀವೆಲ್ಲ ಸ್ವಲ್ಪ ಜವಾಬ್ದಾರಿ ವಹಿಸಿಕೋಬಾರದೇ, ಅಂತ ಮೊದಲಬಾರಿಗೆ 'ಬುಸ್ ಬುಸ್' ಎಂದರು. ಕುಟುಂಬದೊಳಗಿನ ತನ್ನಾಪ್ತರನ್ನು ಕೂರಿಸಿಕೊಂಡು. ಅಲ್ಲಿದ್ದವರಿಗೋ ಪರಮಾಶ್ಚರ್ಯ. ಒಬ್ಬರ ಮುಖವನ್ನೊಬ್ಬರು ಪಿಳಿ ಪಿಳಿ ನೋಡಿಕೊಂಡರು. ಎಲ್ಲಾ ನಾನೇ ಮಾಡ್ತೀನಿ ಅಂತ ಅವರಿಗೆ ವಿಸ್ಮಯ. ಆದರೂ ತುಟಿ ಪಿಟಕ್ ಎನ್ನಿಸಲಿಲ್ಲ.

'ಕುಟುಂಬದ ಗೌರವ ಉಳಿಸೋದಕ್ಕೆ ನಾನು ಬೇಕು. ಆದರೆ ಜವಾಬ್ದಾರಿ ಹೆಚ್ಕೋದಕ್ಕೆ ಯಾರಿಲ್ಲ' ಎಂದೆಲ್ಲ ಅತ್ತೆಮ್ಮ ವಟ್ ವಟ ಅಂತಾನೇ ಇದ್ದರು.

'ಎಷ್ಟಾದರೂ ಅತ್ತೆಮ್ಮ ಅಲ್ಲವೆ' ಅಂತ ಉಳಿದವರೆಲ್ಲ ತಮ್ಮ ಕಾಯಕ ಮುಂದುವರಿಸಿದರು. ಅತ್ತೆಮ್ಮನ ಯಜಮಾನಿಕೆಯಲ್ಲಿ ಒಂದು ಮಹತ್ತರ ಘಟ್ಟ ಸಮೀಪಿಸುತ್ತಿದೆ ಅಂತ ಅವರಿಗೆ ಅನ್ನಿಸಲೇ ಇಲ್ಲ. ಎಂದಿನಂತೆ ಇದೂ ಕೂಡ ಮಾಮೂಲು ಅಂತ ಕಿವಿ ಕೊಡವಿಕೊಂಡು ಹಲ್ಲು ಕಿರಿದರು.

ನಿಜವಾಗಿ ನೋಡಿದರೆ ಅತ್ತೆಮ್ಮನಿಗೂ ಅದೇ ಇಷ್ಟವೊ ಏನೊ !

—ಗಮಾರ

ಜಾಹಿರಾತು ಪುರಾಣ – ಇತಿಹಾಸಗಳಲ್ಲಿ

ಎಲ್ಲಾ ತರಹದ ಹೊಸ ವಿಚಾರಗಳು ಪಶ್ಚಿಮದಿಂದ ಬಂದಿತು ಎಂದು ನಂಬುವಂತೆ, ಜಾಹೀರಾತು ಸಹ ಅಮೇರಿಕಾದಿಂದ ಇಲ್ಲಿಗೆ ಬಂದಿದೆ ಎಂದು ಬಹಳ ಜನ ತಿಳಿದಿದ್ದಾರೆ. ಹೊಸ ಟೈರು, ಸೋಪು ಮಾರಬೇಕಾದವರು, ಹೊಸ ಸಿನಿಮಾಕ್ಕೆ ಜನ ಬರಬೇಕೆಂದು ಬಯಸುವವರು, ಏಕೆ ಕರುಮಾರಿ ಅಮ್ಮನ ದೇವಸ್ಥಾನದ ಗೋಲಕ ತುಂಬಬೇಕು ಎಂದು ಬಯಸುವ ಧರ್ಮದರ್ಶಿಗಳು ಸಹ ಜಾಹೀರಾತು ಮಾದರಿಗಳಿಗೆ ವಿದೇಶದತ್ತ ನೋಡುತ್ತಾರೆ. ಆದರೆ ಆ ಜನರಿಗೆ ಈ ಹುನ್ನಾರಗಳನ್ನು ಕಲಿಸಿದವರು ನಾವೇ ಎನ್ನುವುದು ಬಹಳ ಜನರಿಗೆ ತಿಳಿಯದು. ಅಥರ್ವಣವೇದವನ್ನು ಇಲ್ಲಿಂದ ಸಾಗಿಸಿದ ಜನ ನಮ್ಮ ಹಳೆಯ ಜಾಹೀರಾತುಗಳನ್ನೂ ಇಲ್ಲಿಂದ ಮಾಯಮಾಡಿದ್ದಾರೆ. ಆದರೆ ನಮ್ಮ ಸಂಶೋಧಕರು ಈಗ ದೇಶವನ್ನೆಲ್ಲಾ ಜಾಲಾಡಿ ಪುರಾಣ ಹಾಗೂ ಇತಿಹಾಸಕಾಲಗಳ ಕೆಲವು ಜಾಹೀರಾತು ಮಾದರಿಗಳನ್ನು ದೊರಕಿಸಿಕೊಂಡಿದ್ದಾರೆ. ಅವುಗಳಲ್ಲಿ ಕೆಲವನ್ನು ನಿಮ್ಮ ಅವಗಾಹನೆಗಾಗಿ ಇಡುತ್ತಿದ್ದೇವೆ.

ಈಗ ಪ್ರಕಟವಾಗಿದೆ.

ಸಾಹಿತ್ಯದಲ್ಲಿ ಒಂದು ಹೊಸಹೆಜ್ಜೆ

ವ್ಯಾಸರ

ಮಹಾಭಾರತ

18 ಪರ್ವಗಳು. ಒಂದು ಲಕ್ಷಕ್ಕೂ ಮೀರಿದ ಶ್ಲೋಕಗಳು

* ಇಕೊ, ಇಂದಿನ ಇಂಡಿಯಾದ ಜೀವಂತ ಕಥೆ

** ಯುವಜನರ ವಿವಾಹ ಪೂರ್ವ, ವಿವಾಹನಂತರ ವಿವಾಹದ ಒಳಗಿನ ಹೊರಗಿನ ಪ್ರಣಯದ ಬಿಚ್ಚುನೋಟ

*** ಹತ್ತು ಸಹಸ್ರ ಶ್ಲೋಕವನ್ನೂ ಮೀರುವ ಹೊಡೆದಾಟದ ದೃಶ್ಯಗಳು ವಿಮರ್ಶಕರು ಹೇಳುತ್ತಾರೆ.

† ಇಲ್ಲಿಲ್ಲದ್ದು ಇನ್ನೆಲ್ಲೂ ಇಲ್ಲ – ಸಾಹಿತ್ಯ ಮೀಮಾಂಸಕ

†† ಇದು ಐದನೆಯ ವೇದವೇಸರಿ – ಸನಾತನಿ.

ಇದೇ ಆಶ್ವಯುಜ ಶುದ್ಧದಶಮಿಯ ಒಳಗೆ ಕೊಳ್ಳುವವರಿಗೆ ಶೇಕಡ 20ರ ರಿಯಾಯಿತಿ.

ಹೊಸ ವೃತ್ತಗಳು, ಹೊಸಪರದೆಗಳು

ವೈಶಾಖ ಪಾಡ್ಯಮಿಯಂದು
ಮೊದಲ ಪ್ರದರ್ಶನ
ಕಾಳಿದಾಸ ಕವಿಯ
ಅಭಿಜ್ಞಾನ ಶಾಕುಂತಲ

* ಹದಿಹರೆಯದ ಹುಡುಗಿಯ ಪ್ರೇಮದ ಸುಂದರಕಥೆ

* * ಆಶ್ರಮವಾಸಿ ಹುಡುಗಿಯನು ಮಹಾರಾಜ ಮೋಹಿಸಿದ. ಆದರೆ ಮುಂದೆ ಪುರಸ್ಕರಿಸುತ್ತಾನೆಯೆ ?

† ರಂಗಮಂಟಪದಲ್ಲಿ ಹಿಂದೆಂದೂ ಕಂಡಿರದ ಸಹಸ್ರ ಪಂಜುಗಳ ಬೆಳಕಿನ ವ್ಯವಸ್ಥೆ

† † ರಂಗಮಂಚದ ಮೇಲೆ ಮೊದಲಬಾರಿಗೆ ಜಿಂಕೆಗಳ, ವನ್ಯ ಮೃಗಗಳು ಹಾಗೂ ಒಂದು ದುಂಬಿ.

ವಿ. ಸೂ : ಪ್ರೇಕ್ಷಕರು ಮತ್ತೆ ಕೇಳಬಯಸುವ ಹಾಡುಗಳನ್ನು ಮತ್ತೆ ಹೇಳುವುದು ಅಥವಾ ಬಿಡುವುದು ಕಲಾವಿದರ ಇಷ್ಟದಂತೆ.

ಕೆಲಸ ಖಾಲಿ ಇದೆ

ಅನುಭವ ಮಂಟಪದಲ್ಲಿ ಹೇಳುವ ವಚನಗಳೆಲ್ಲಾ ಶೀಘ್ರಲಿಪಿಯಲ್ಲಿ ಬರೆದುಕೊಳ್ಳುವ ಲಿಪಿಗಾರರು ಬೇಕಾಗಿದ್ದಾರೆ:

ಉತ್ತಮ ವೇತನ, ಉಚಿತ ಭೋಜನ ಮತ್ತು ವಸತಿ.

ಹಿಂದುಳಿದ, ಅತಿ ಹಿಂದುಳಿದ ವರ್ಗಗಳವರಿಗೆ ನಿಯಮಾನುಸಾರ ಮೀಸಲಾತಿ ಇದೆ.

ವಿ. ಸೂ. : ಈಗಾಗಲೇ ವಚನಗಳನ್ನು ಬರೆದಿರುವವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ವಿಶೇಷ ರಥಯಾತ್ರೆ

ಹಸ್ತಿನಾಪುರದಿಂದ ದ್ವಾರಕೆಗೆ ವಿಶೇಷ ಪ್ರವಾಸ

* ಇದೇ ಶ್ರಾವಣ ಶುದ್ಧ ಏಕಾದಶಿಯಂದು ಹೊರಟು ಮೂರು ವರ್ಷದಲ್ಲಿ ಹಿಂದೆ ಬರುವ ಕಾರ್ಯಕ್ರಮ.

* * ಪ್ರವಾಸಿಗಳೊಂದಿಗೆ ನಮ್ಮ ಕಂಪನಿಯ ಅಡಿಗೆಯವರು, ವೈದ್ಯರು ಪುರೋಹಿತರು—

* * * ಈ ಯೋಜನೆ ಕುರು ಸರ್ಕಾರದ ರಜಾ ಪ್ರವಾಸಭತ್ಯಕ್ಕೆ ಮನ್ನಣೆಪಡೆದಿದೆ.

ವಿ. ಸೂ. : ಪ್ರವಾಸಿಗಳು ತಮ್ಮ ಊಟದ ತಟ್ಟೆಯನ್ನು ತಮ್ಮೊಂದಿಗೆ ತರಬೇಕು.

ಸಂಕ್ಷಿಪ್ತ ಜಾಹೀರಾತುಗಳು.

ಪ್ರಿಯ ಧ್ರುವ
ನೀನೆಲ್ಲಿದ್ದರೂ ಕೂಡಲೆ ಮನೆಗೆ ಬಾ. ನೀನು ಹೋದಾಗಿನಿಂದ ನಿಮ್ಮಮ್ಮ ಅನ್ನ ನೀರು ಬಿಟ್ಟು ಕೊರಗುತ್ತಿದ್ದಾಳೆ.
ನಿನ್ನ ಆಸೆಯಂತೆ ಇನ್ನುಮುಂದೆ ಸೋಮವಾರ, ಬುಧವಾರ, ಶುಕ್ರವಾರಗಳಂದು ಸಿಂಹಾಸನದಲ್ಲಿ ಅಪ್ಪನ ಜೊತೆ ಕುಳಿತುಕೊಳ್ಳಬಹುದು. ಉಳಿದದಿನ ಮಾತ್ರ ನಿನ್ನ ತಮ್ಮ ಕುಳಿತುಕೊಳ್ಳುವ ವ್ಯವಸ್ಥೆಗೆ ನಿಮ್ಮ ಚಿಕ್ಕಮ್ಮ ಒಪ್ಪಿದ್ದಾಳೆ.

* *

ಕುಮಾರಧ್ರುವ, 8ವರ್ಷ, ಹಿಂದೆ ಬಾಚಿದ ಉದ್ದನೆಯ ಕೂದಲು, ಮನೆಯಿಂದ ಹೊರಟಾಗ ಬಿಳಿಬಟ್ಟೆ ಹಾಗೂ ಅಂಗವಸ್ತ್ರ ಧರಿಸಿದ್ದ. ಈ ಹುಡುಗನ ಬಗೆಗೆ ಮಾಹಿತಿ ಒದಗಿಸಿದವರಿಗೆಸೂಕ್ತ ಬಹುಮಾನ.

ವೈವಾಹಿಕ
ಮಿಥಿಲಾ ರಾಜನ ಏಕಮಾತ್ರಪುತ್ರಿಗೆ ವರಬೇಕು.
ವಧು ಅತಿ ಸುಂದರಿ.
ಸರ್ವಗುಣಸಂಪನ್ನೆ.
ಹೆಚ್ಚಿನ ಆಯ್ಕೆಗೆ ಅವಕಾಶವಿರಲಿ ಎಂದು ಈ ಪ್ರಕಟಣೆ.
ಕ್ಷತ್ರಿಯ ರಾಜಕುಮಾರರ ಪರವಾಗಿ ವರನ ತಂದೆ ಅಥವ ಗುರು ವ್ಯವಹರಿಸಬೇಕು.
ಆಯ್ಕೆ ದೇಹ ದಾರ್ಢ್ಯ ಹಾಗೂ ಬಿಲ್ಲುಗಾರಿಕೆಯ ಆಧಾರದ ಮೇಲೆ.

ನೀವೆಲ್ಲಾ ಕೇಳುತ್ತಿದ್ದ ಪ್ರಶ್ನೆಗೆ ಇದೋ ಇಲ್ಲಿ ಉತ್ತರ

ನಿಮ್ಮ ಪ್ರಶ್ನೆ : ಮೇನಕೆಯು ಒಂದು ಹೊನಗೆ ತಪಸ್ವಿ ವಿಶ್ವಾಮಿತ್ರನ ಚಿತ್ರವನ್ನು ಹೇಗೆ ಕಲಕಿತು ?

ಮೇನಕೆ ಹೇಳುತ್ತಾಳೆ : "ನನ್ನ ವಿಜಯದ ಹಿಂದಿನ ಕಾರಣ: ಕಲ್ಕಟ್ಟು ಹಲ್ಪುಡಿ. ನಾನು ಬೆಳಗ್ಗೆ ಮತ್ತು ರಾತ್ರಿ ಕಲ್ಕಟ್ಟು ಹಲ್ಲುಪುಡಿಯಿಂದ ಹಲ್ಲುಜುಜ್ಜುತ್ತೇನೆ. ಇದರಿಂದ ನನ್ನ ಹಲ್ಲುಗಳು ಮುತ್ತಿನಂತೆ ಹೊಳೆಯುತ್ತವೆ." ನನ್ನ ನಕ್ಕರೆ ಬೆಳದಿಂಗಳು ಹರಡುತ್ತದೆ ಎಂದು ಎಲ್ಲರೂ ಹೇಳುತ್ತಾರೆ.

ನೀವೂ ಇಂದೇ ಕೊಳ್ಳಿ –ಕಲ್ಕಟ್ಟು ಹಲ್ಪುಡಿ.

ಉಚಿತ : ಒಟ್ಟು ಮೂರುಪೊಟ್ಟಣ ಕಲ್ಕಟ್ಟು ಹಲ್ಪುಡಿ ಕೊಂಡವರಿಗೆ ನಾಲ್ಕು ಬೇವಿನ ತುಂಡುಗಳು ಉಚಿತ. ಇದು ಬೇವಿನ ತುಂಡುಗಳ ದಾಸ್ತಾನು ಇರುವವರೆಗೆ ಮಾತ್ರ.

ಮೊಗಲಾಯಿ ಸರ್ಕಾರ

ಗೋರಿ ನಿರ್ಮಾಣ ವಿಶೇಷ ವಿಭಾಗ

ಆಗ್ರಾ ಪಟ್ಟಣದಲ್ಲಿ ಯಮುನಾನದಿಯ ದಂಡೆಯಲ್ಲಿ ಕಟ್ಟಲು ನಿರ್ಧರಿಸಿರುವ ಬೇಗಂ ಮುಮತಾಜ್ ಮಹಲ್ ಸ್ಮಾರಕವನ್ನು ಕಟ್ಟಲು ಟೆಂಡರ್ ಕರೆಯಲಾಗಿದೆ. 20000 ಕೆಲಸಗಾರರನ್ನು ಸರ್ಕಾರವೇ ಒದಗಿಸುವುದು. ಅವರು ಕೆಲಸ ಮಾಡುವಂತೆ ಮಾಡಲು ವಿಶೇಷ ಅಶ್ವ ಪಡೆಯನ್ನು ನೇಮಿಸಲಾಗಿದೆ. ಇಂತಹ ಕೆಲಸಗಳನ್ನು ಮಾಡಿ ಅನುಭವ ಇರುವವರು ನಿಗದಿ ಪಡಿಸಿದ ಫಾರಂಗಳಲ್ಲಿ ತಮ್ಮ ಟೆಂಡರ್ ಕಳುಹಿಸಬಹುದು.

ವಿಶೇಷ ಕರಾರು : ಸ್ಮಾರಕದ ಆಕಾರವನ್ನು ಜಹಾಪನರು ತಮಗೆ ಬೇಕಾದಾಗ ಬೇಕಾದಂತೆ ಬದಲಿಸಲು ಹೇಳಬಹುದು.

ವಿ.ಎಸ್. ಚಂದ್ರಶೇಖರ್

ನಗೆಹನಿ

ಗುರು-ನಟ-ದೈವಜ್ಞ-ಭಿಷಕ್-
ಶ್ರೋತ್ರಿಯ- ಮುಖ - ಗೃಹ್ವ ರಾಣಿಯಂದಿ
ನಸ್ಯಃ

ವ್ಯಾಕರಣ ಸಿಂಹಬೀತಾ
ಅಪಶಬ್ದ ಮೃಗಾಃ ಕ್ವ ವಿಚರೇಯುಃ ?

—ವ್ಯಾಕರಣ ಒಂದು ಭೀಕರ ಸಿಂಹ. ಅಪಶಬ್ದ ಎಂಬ ಮೃಗಗಳಿಗೆ ಅದರ ಅಂಜಿಕೆ ಬಹಳ. ಆದರೂ ಅವು ನಿರ್ಭಯವಾಗಿ ಸುಳಿದಾಡುವುದಕ್ಕೆ ಒಳ್ಳೆಯ ಜಾಗಗಳನ್ನೇ ಕಂಡು ಕೊಂಡಿವೆ. ಅವು ಯಾವುವೆಂದರೆ ಶಿಕ್ಷಕರು, ನಟರು, ಜೋಯಿಸರು ವೈದ್ಯರು, ಶ್ರೋತ್ರಿಯರು ಇವರ ಅಗಲವಾದ ಬಾಯಿಗಳು, ಈ ವಿಶಾಲವಾದ ಜಾಗಗಳಿಲ್ಲದಿದ್ದರೆ ಅವು ಎಲ್ಲೂ ಸಂಚರಿಸುವಂತೆಯೇ ಇಲ್ಲ.

ಡಾ|| ಕೆ. ಕೃಷ್ಣಮೂರ್ತಿ

ನಗರ ಸಭೆ ಚುನಾವಣೆಗಳಲ್ಲಿ ಜನತಾಪಕ್ಷ ಎಷ್ಟೋ ಕ್ಷೇತ್ರಗಳಲ್ಲಿ ಸ್ಪರ್ಧಿಸಿಯೇ ಇರಲಿಲ್ಲ

—ಶ್ರೀ ರಾ. ಹೆಗ್ಗಡೆ.

ಬೆಂಗಳೂರಲ್ಲಿ ನಡೆದದ್ದು.
ರಸ್ತೆಯ ಕೆಂಪು ದೀಪದ ಬಳಿ ಸ್ಕೂಟರ್ ನಿಲ್ಲಿಸಲಿಲ್ಲ ಎಂದು ಸವಾರನನ್ನು ಕೋರ್ಟಿನಲ್ಲಿ ನಿಲ್ಲಿಸಿದರು.

'ನನ್ನ ತಪ್ಪಲ್ಲ ಸ್ವಾಮಿ, ತಪ್ಪು ಮಲೆಯಾಳೀ ಸಿನೆಮ ಪೋಸ್ಟರಿನದು' ಎಂದು ಅರಿಕೆ ಮಾಡಿಕೊಂಡ ಸವಾರ. ಜಡ್ಜಿಯವರು ನಕ್ಕು ಅವನನ್ನು ಖುಲಾಸೆ ಮಾಡಿದರಂತೆ.

ಚಿಂತಿಸಿ ದೈವವ ಪಡೆದುದುಂಟೆ?

ಒಂದು ದಿನ ಬೆಳಗ್ಗೆ ಅಪ್ರೊತ್ತಿಗೇ ಎಂ. ಓಡೋಡಿ ಬಂದು ನನ್ನನ್ನು ಎಬ್ಬಿಸಿ, ನಾನು ಆಕಳಿಸುತ್ತಾ, ಕಣ್ಣುಜ್ಜಿಕೊಳ್ಳುತ್ತಾ ಎದ್ದು ನಿಂತಾಗ, 'ದೇವರು ಇದ್ದಾನೆಯೋ?' ಎಂದು ಎಡ ಅಂಗೈ ಮೇಲೆ ಬಲಮುಷ್ಟಿ ಗುದ್ದಿಕೊಳ್ಳುತ್ತಾ ಕೇಳಿದ.

ನಾನು ಅವನಿಗೆ ಹೇಳಿದ್ದನ್ನು ಕೇಳಿ, ಯದಿ ಕುತೂಹಲಂ – 'ಮಾವೋತ್ಸೆತುಂಗ್ ತನ್ನ ಚಿಂತನೆಗಳಿಗೆ ಜಗತ್ಪ್ರಸಿದ್ಧನಾಗಿದ್ದ ವ್ಯಕ್ತಿ ಎನ್ನುವುದು Mao's Thoughts' ಎಂಬ ಗ್ರಂಥದ ಶೀರ್ಷಿಕೆಯ ಜನಪ್ರಿಯತೆಯಿಂದ ತಿಳಿದುಬರುವ ಸಂಗತಿ.'
'ಗ್ರಂಥದ ಜನಪ್ರಿಯತೆ ಎಂದೇಕೆ ಹೇಳುತ್ತಿಲ್ಲ?' ಎಂದು ಎಂ. ತಲೆ ಹಾಕಿದ.
ಆಗ ನಾನು ಹೇಳಿದ್ದೇನೆಂದರೆ–

'ಎಂ., ನಮ್ಮಲ್ಲಿ ಬಹಳ ಮಂದಿ ಆ ಗ್ರಂಥದ ಪ್ರತಿಯನ್ನು ಕಂಡಿಲ್ಲ. ಓದಿರುವವರಂತೂ, ಕೆಲವು ಥಿಯೊರಿಟಿಷಿಯನ್ಸ್‌ನ್ನು ಬಿಟ್ಟರೆ - ಬಿಡಬೇಕು. ಯಾಕೆಂದರೆ ಅವರು ಯಾರು, ಎಲ್ಲಿ ಉತ್ಪತ್ತಿಯಾಗುತ್ತಾರೆ, ಹೇಗೆ ಬೆಳೆಯುತ್ತಾರೆ, ಹೇಗೆ ಅಂತರ್ಧಾನವಾಗುತ್ತಾರೆ ಎಂಬುದು ತೀರಾ ಅನಿರ್ದಿಷ್ಟ- ಓದಿದ ಥಿಯೋರಿಟಿಷಿಯನ್ಸ್ ತೀರಾ 'ತೀರಾ ಕಮ್ಮಿ. ಇವರಿದ್ದಾರಲ್ಲ, ಅವರು ಬೇರೆ ಏನೋ ಆಗಿದ್ದು ಕೆಲವೊಂದು ಕ್ಷಣಮಾತ್ರ ಥಿಯೋರಿಟಿಷಿಯನ್ಸ್ ಆಗಿ ಮೆರೆದು, ಮತ್ತೆ ಆ ಹಿಂದಿನ ಏನೋ ಆಗಿ ಬಿಡುತ್ತಾರೆ. ಆದ್ದರಿಂದ ಅವರ ಲೆಕ್ಕ ಸಿಕ್ಕುವುದಿಲ್ಲ. ಅದನ್ನು, ಎಂದರೆ Mao's Thoughts ಅನ್ನು ಸಂಪೂರ್ಣ ಓದಿಕೊಂಡವರಂತೂ ಇನ್ನೂ ಕಮ್ಮಿ. ಆದ್ದರಿಂದ ಆ ಪುಸ್ತಕ ತನ್ನ ಶೀರ್ಷಿಕೆಯ ಬಲದಿಂದಲೇ ಜನಪ್ರಿಯ ಎನ್ನುವುದು ವಾದಾತೀತ. ಓದಿಕೊಂಡಂಥ ಕೆಲವೇ ಮಂದಿಯೂ ಕೂಡ, reading one's Thought ಎಂಬರ್ಥದಲ್ಲಿ ಓದದೆ reading a published or written material ಎಂಬರ್ಥದಲ್ಲೇ ಓದಿಕೊಂಡವರಾದ್ದರಿಂದ ಅವರೂ ಕೂಡ ಮಾವೋ'ಸ್ ಥಾಟ್‌ಗಳನ್ನು ಓದಿದ್ದಾರೆಯೇ ಎಂಬುದು ಸಂದೇಹಾಸ್ಪದವಾಗಿಯೇ ಉಳಿದು ಆ ಥಾಟ್‌ಗಳಿಗೆ ಪ್ರಗಟ್ಟತೆ ಬಾರದೆ ಇದ್ದೀತೆ? ಇದನ್ನೆಲ್ಲಾ ಯಾಕೆ ಹೇಳಿದೆನೆಂದರೆ, ಈ ಮಾತುಗಳು ಥಾಟ್‌ಕಾನ್ಸೆಪ್ಟ್‌ನ ಕೆಲವೊಂದು ಲಕ್ಷಣಗಳಿಗೆ ಒಂದು ವಿಧವಾದ ಪ್ರಿಯಾಂಬಲ್ ಆಗಬಹುದೇನೋ ಎಂಬ ಆಸೆಯಿಂದ, ಅಷ್ಟೆ. ಮಾವೋನ ಸಹಸ್ರಾರು ಥಾಟ್‌ಗಳಲ್ಲಿ ಒಂದು ಮಾತ್ರ ಪ್ರಚಂಡ ಶಕ್ತಿಯಿಂದ ನನ್ನನ್ನು ಆಕರ್ಷಿಸುತ್ತದೆ. ನಾನು ಆ ಥಾಟ್ ಮೇಲೆ ಥಿಂಕಿಂಗ್ ನಡೆಸಿದ್ದೇನೆ.

Thinking about thinking, I thought about a thought.

ಆ ಥಾಟ್‌ವರೂ ಏನು ? ಅವನ್ನು ತಿಳಿಯುವ ಮೊದಲು ಆ ಚಿಂತನೆಯನ್ನು ಜಗತ್ತಿಗೆ ಕೊಡುಗೆಯಾಗಿ ಕೊಟ್ಟ ವ್ಯಕ್ತಿಯ ಬಗ್ಗೆ ಸ್ವಲ್ಪ ತಿಳಿದುಕೊಳ್ಳುವುದು ಅವಶ್ಯಕ. ಮಾವೋ ತನ್ನ ಅತ್ಯುಚ್ಚ ಅಧಿಕಾರವನ್ನು ಶತ ಶತಾಂಶ ಅನುಭವಿಸುತ್ತಿದ್ದನೆಂದು ಇಡೀ ಜಗತ್ತು ನಂಬಿದ್ದ ಕಾಲದಲ್ಲಿ ರಾಜಕೀಯ ಟಿಪ್ಪಣಿಕಾರರು ಚೀನಾ ವೀಕ್ಷಕರು, ಪೌರಾತ್ಯ ರಾಜಕಾರಣ ಸಮೀಕ್ಷಕರು ಒಂದು ಊಹಾಪೋಹವನ್ನು ಆಗಾಗ್ಗೆ ಪ್ರಚಾರಕ್ಕೆ ತರುತ್ತಿದ್ದರು. 'ಮಾವೋ ಅಸ್ವಸ್ಥ ?' 'ಮಾವೋ ಜರ್ಝರಿತ ?' 'ಮಾವೋ ತೀವ್ರ ಗಂಭೀರ ಪರಿಸ್ಥಿತಿಯಲ್ಲಿ ಆಸ್ಪತ್ರೆಗೆ ?' 'ಮಾವೋ ಅದೃಶ್ಯ ?' 'ಮಾವೋ ಇನ್ನಿಲ್ಲ ?' ಇತ್ಯಾದಿ ಇತ್ಯಾದಿ. ಈ ಎಲ್ಲಾ ಸಂಶಯಗಳನ್ನು ಸೀಳಿಕೊಂಡು ಕಾಲ-ಕಾಲಕ್ಕೆ ಕ್ಲುಪ್ತವಾಗಿ ಮಾವೋನ ಥಾಟ್‌ಗಳಾದರೂ ಪುಂಖಾನುಪುಂಖವಾಗಿ ಹೊರಬರುತ್ತಲೇ ಇದ್ದವು. ಈ ಥಾಟ್‌ಗಳ ಮಧ್ಯೆ ಒಮ್ಮೊಮ್ಮೆ ಅಪರೂಪವಾಗಿ, 'ಮಾವೋ ಇಲ್ಲಿ ಕಾಣಿಸಿಕೊಂಡ !' 'ಮಾವೋ ಅಲ್ಲಿ ಭಾಷಣ ಮಾಡಿದ !' 'ಸಹಸ್ರ ಪುಷ್ಪಗಳರಳುವ ಚೌಕದಲ್ಲಿ ಮಾವೋ ಪ್ರತ್ಯಕ್ಷ ! 'ಯಾಂಗ್‌ಟ್ಸೀ ನದಿಯಲ್ಲಿ ಮಾವೋ ಈಜು ಹೊಡೆದ !' ಎಂಬ ಸುದ್ದಿಗಳು (ಕೆಲವು ಸಲ ಯಾಂಗ್‌ಟ್ಸೀಯ) ಫೋಟೋಗಳ ಜೊತೆ ಪೇಪರುಗಳಲ್ಲಿ ಬರುತ್ತಿತ್ತು. ಮಾವೋ ಇದ್ದಾನೋ ಇಲ್ಲವೊ ಎಂಬ ಗೊಂದಲಕ್ಕೆ ಈ ಎಲ್ಲಾ ಮಾತುಗಳೂ ಸಾಕ್ಷಿ. ಇಂಥ ದಿನಗಳಲ್ಲಿ ಮಾವೋನ ದಿನಚರಿಯನ್ನು ರಚಿಸಿದ ಮೇಧಾವಿಯೊಬ್ಬ ಅವನ ಥಾಟ್‌ಗೆ ಕೊಟ್ಟ ಸ್ಥಾನಮಾನ ನನ್ನನು ಚಕಿತಗೊಳಿಸಿತು. ಒಂದು ದಿನದ ದಾಖಲೆಯ ಪ್ರಕಾರ, "ಮಾವೋ ಬೆಳಗ್ಗೆ ಎಚ್ಚರವಾದ ಕೂಡಲೆ ಮಾಡಿದ ಕಾರ್ಯವೆಂದರೆ, ತನ್ನ ಜಗತ್ಪ್ರಸಿದ್ಧ ಚಿಂತನೆಗಳನ್ನು ಚಿಂತಿಸಿದ್ದು. ಮೊದಲ ಚಿಂತನೆ ಎಂದರೆ, 'ನಾನು ಬದುಕಿದ್ದೇನೋ ಇಲ್ಲಾ ಸತ್ತಿದ್ದೇನೋ ?' ಅದು ಮಾವೋಗೆ thought for the day"

'A man woke up one fine morning and found himself dead' ಎನ್ನುವ ಎಕ್ಸಿಸ್ಟೆನ್‌ಶಿಯಲ್ ಫಿಲಾಸಫಿಕಲ್ ಥಾಟ್‌ಗೆ ಇದು ಸರಿಸಮಾನವಾಗಬಹುದೋ ಸವಾಲಾಗಬಹುದೋ, ಯೋಚಿಸಿ, ಎಂ. A paisa for your thought. ಎರಡು ಪೈಸೆಯ ಹಳೆಯ ಬಿಲ್ಲೆಯೊಂದನ್ನು ಇಟ್ಟುಕೊಂಡಿದ್ದೇನೆ. ಚಿಲ್ಲರೆ ಇಲ್ಲ.

ಇರಲಿ; ದೇವರ ಬಗ್ಗೆ ನಮಗೆ ಬರಬಹುದಾದ ಮೂಲಭೂತ ಸಂದೇಹ ಒಂದೇ. ದೇವರು ಇದ್ದಾನೋ ಇಲ್ಲವೋ ? ಅಲ್ಲವೋ ? ಇದರ ಮೇಲೆ ಒಂದು ರೈಡರ್ ಇದೆ. ಈ ಪ್ರಶ್ನೆ ಯಾರಿಗೆ ಮುಖ್ಯ ? ದೇವರಿಗಂತೂ ಅಲ್ಲ, ಎಂದು ಜಿಜ್ಞಾಸುಗಳು ಹಾರಿಕೆಯ ಉತ್ತರವನ್ನು ಇತರರಿಂದ ಪಡೆದಿದ್ದಾರೆ. ನಾನಾದರೂ ಏನು ಹೇಳಲು ಪ್ರಯತ್ನಿಸುತ್ತಿದ್ದೇನೆಂದರೆ, ಯಾವಾಗ ಮನುಷ್ಯ ದೇವರಿದ್ದಾನೆಯೇ, ಇಲ್ಲವೇ ಎಂಬ ಪ್ರಶ್ನೆಯನ್ನು ಹಾಕಿಕೊಂಡು, ಇತರರಿಗೆ ಹಾಕಿ ತಲೆ ಕೆಡಿಸಿಕೊಳ್ಳಲು ಶುರುಮಾಡುತ್ತಾನೋ ಆಗ ಅವನೂ ದೇವರಾಗಲು ಸಂಚು ನಡೆಸುತ್ತಿದ್ದಾನೆಂದು ತಾತ್ಪರ್ಯ.

ಅದು ಇಲ್ಲದ ದೇವರೇ ಆಗಲೊಲ್ಲದೇಕೆ. ಮಾವೋನ್ನೇ ನೋಡು ತಾನಿದ್ದೇನೋ ಇಲ್ಲವೋ ಎಂಬುದೇ ಆತನ ದಿನದ ಮೊದಲ ಚಿಂತನೆ. ಅದು ದಿನದ ಕೊನೆಯ ಚಿಂತೆಯೂ ಆಗಿದ್ದಿರಬಹುದು. ಅದು ಬೇರೆ ವಿಷಯ. ಈ ಲಕ್ಷಣ ದೇವರಿಗೊಪ್ಪುವಂತೆ ಮಾವೋಗೂ ಹೇಗೆ ಒಪ್ಪುತ್ತದೆ ಎಂಬ ಸೂಕ್ಷ್ಮಾಂಶ ಈಗಾಗಲೇ ನಿನಗೆ ಮನವರಿಕೆಯಾಗಿರಬೇಕು. ಇನ್ನೂ ಒಂದು ಹೆಜ್ಜೆ ಮುಂದೆ ಬಾ. 'ಮಾವೊ ಇದ್ದಾನೋ ಇಲ್ಲವೊ ?' ಎಂಬ ಪ್ರಶ್ನೆಯನ್ನು ದೇವರಿದ್ದರೆ ಅವನೂ ಕೇಳಿಕೊಂಡಿರಲಿಕ್ಕೆ ಸಾಕು. ಅದು ಮಾವೋಗೆ ಖಂಡಿತಾ ಅಪ್ರಸ್ತುತ. ದೇವರ ವಿಷಯದಲ್ಲಿ ಹಾರಿಕೆ ಎನಿಸಬಹುದಾದ ಉತ್ತರ- ರೈಡರ್ ಬಗ್ಗೆ ಹೇಳುತ್ತಿದ್ದೇನೆ–ಮಾವೋನ ವಿಷಯದಲ್ಲಿ ಸಂಪೂರ್ಣವೂ, ಸಮರ್ಪಕವೂ ನಿಸ್ಸಂದಿಗ್ಧವೂ ಆಗಿ ತೋರುತ್ತಿದೆಯಲ್ಲವೊ ಈ ಒಂದು ಪ್ರಶ್ನೆಯ ದೆಸೆಯಿಂದ ಮಾವೊ ದೈವತ್ವದ ಪರಿಪೂರ್ಣ ಸಾಮ್ಯವನ್ನು ಗಳಿಸಿಕೊಂಡನೆಂದು ಹೇಳಬಹುದಲ್ಲವೆ ? ದೇವರ ಬಗ್ಗೆ ನಾನು, ನೀನು ಚಿಂತಿಸುವಂತೆ, ಅಂದರೆ, ದೇವರಿದ್ದಾನೋ, ಇಲ್ಲವೊ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವಂತೆ ರಾಜಕಾರಣ ವೀಕ್ಷಕರು, ಸಮೀಕ್ಷಕರು, ತಜ್ಞರು, ಪತ್ರಿಕೋದ್ಯಮಿಗಳು ಮಾವೋನ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲವೇ ? ಪುರಾಣ ಪುಣ್ಯಕಥೆಗಳಲ್ಲಿ ನಾವು ನೋಡುವಂಥ ದೃಶ್ಯಗಳು ದೇವರು ಕಂಬದಲ್ಲಿ ಕಾಣಿಸಿಕೊಂಡ, ಅಂತರಿಕ್ಷದಲ್ಲಿ ಶಿವಪಾರ್ವತಿ ದರ್ಶನ ಕೊಟ್ಟು ಹೂ ಮಳೆಗರೆದರು, ರಣರಂಗದಲ್ಲಿ ವಿರಾಟ್ ರೂಪ ಪ್ರಕಟಣೆಗೊಂಡಿತು. ಇಲ್ಲಿ ಈ ಭಕ್ತೆಗೆ, ಆ ಭಕ್ತನಿಗೆ ದೇವರು ಪ್ರತ್ಯಕ್ಷನಾದ: ಮಾವೋನ ಚಟುವಟಿಕೆಗಳನ್ನು ನೆನಪಿಗೆ ತರುವುದಿಲ್ಲವೇ ? ಇದರಿಂದ ತಿಳಿದುಬರುವ ಮತ್ತೊಂದು ಸತ್ಯವೆಂದರೆ - ದೇವರು ಇದ್ದಕ್ಕಿದ್ದಂತೆ ಪ್ರತ್ಯಕ್ಷನಾಗುತ್ತಾನೆ, ಅಷ್ಟೇ ಇದ್ದುದಕ್ಕಿಂತ ಅದೃಶ್ಯನೂ ಆಗುತ್ತಾನೆ. ಚೆಷೈರ್ ಕ್ಯಾಟ್‌ನಂತೆ ಅಲ್ಲ (ಅದೇ ನಾ. ಕಸ್ತೂರಿಯವರ ಬಾಬಾಬುಡನ್‌ಗಿರಿ ಬೆಕ್ಕು). ಅದು ಲೆವಿಸ್* ಕರೋಲನ ಲಂಗು ಲಗಾಮಿಲ್ಲದ ಫಾಂಟಸಿಯೇ ಸರಿ. ವಾಸ್ತವ

ಜೀವನದಲ್ಲೂ ಇಂತಹ ಅಂದರೆ 'ಇದ್ದಕ್ಕಿದ್ದಂತೆ' ಲಕ್ಷಣಗಳನ್ನು ಪ್ರಕಟಪಡಿಸುವ ಮನುಷ್ಯ ದೇವರೇ ಅಲ್ಲದಿದ್ದರೂ, ಕನಿಷ್ಠ ಪಕ್ಷ ದೇವಾಂಶ ಸಂಭೂತನೆಂದು ಯಾಕೆ ಒಪ್ಪಿಕೊಂಡು ಬಿಡಬಾರದು ? ನಾ ರುದ್ರ: ಕ್ರಮಪಾತಕಃ ಮಾವೋ ಕ್ರಮಪಾತಕನಲ್ಲದಿದ್ದರೆ ಮತ್ತಾರು? ನಾವೆಲ್ಲರೂ ಅಷ್ಟಿಷ್ಟಾದರೂ ಇಂತಹ ಲಕ್ಷಣಗಳನ್ನು ಹೊಂದಿದ್ದೇವೆಂಬ ಒಂದೇ ಕಾರಣದಿಂದ ದೇವರ ಆಥ್ರೊಪೊಮಾರ್ಫಿಕ್ ಆಗಿ ತಾನಿದ್ದೇನೋ ಇಲ್ಲವೊ, ತಾನುಂಟೋ ಮೂರು ಲೋಕ ಉಂಟೋ ಎಂಬ ನಿಗೂಢ ಚಿಂತೆಯಲ್ಲಿ ಮುಳುಗಿದ್ದಾನೆಂದು ನಿನಗಾದರೂ ಅನಿಸು

---

* 'The God that failed' ಕೀರ್ತಿಯ ನಪಾಸಾದ ದೇವರನ್ನು ಇಲ್ಲಿ ನಾನು ತಪ್ಪುಗ್ರಹಿಕೆಯಿಂದ ಸ್ಮರಿಸುತಿದ್ದೇನೆಂದು ತಿಳಿಯುದಿರಿ. ಮಾವೋ ಕಮೂನಿಸ್ಟ್ ಇದ್ದರೂ ಈ ಬರಹ ಕಮ್ಯೂನಿಸ್ಟ್‌ಗೆ ಸಂಬಂಧ ಪಟ್ಟುದುದಲ್ಲ, ದೇವರಿಗೂ ಕಮ್ಯೂನಿಸ್ಟ್‌ಗೂ ಇರುವಷ್ಟೇ ಅಂತರ ಇಲ್ಲೂ ಇದೆಯೆಂಬುದನ್ನು ಎಂ. ಒಪ್ಪಿಕೊಂಡಿದ್ದಾನೆ ಸಾಕು,

ವುದಿಲ್ಲವೆ? ಆದ್ದರಿಂದ thought is the essence of matter. Now, there is food for thought for you., Think it ove or munch it over as you like it. Try to become god himself yourself, and don't pester me in the early hours. ದೈವ ಚಿಂತನೆಗಿಂತಲೂ ಈ ವೇಳೆಯಲ್ಲಿ ಸಕ್ಕರೆನಿದ್ದೆಯೇ ನನಗೆ ಶ್ರೇಯಸ್ಕರ.

ನನ್ನ ಅರಿವಿಗೆ ಬಾರದಂತೆ ಎಂ. ನನ್ನ ಹಾಸಿಗೆಯ ಮೇಲೆ ಪೊಗದಸ್ತಾಗಿ ನಿದ್ದೆ ಹೊಡೆಯುತ್ತಿದ್ದ. ಅವನ ಪಾರ್ಥಿವ ಶರೀರದ ಮೇಲೆ ಒಂದು ದುಂಪಟಿ ಎಳೆದು ಬಚ್ಚಲು ಮನೆಗೆ ಹೋದೆ,

—ಶೀಪಿ

ದೇವರು (ವಿಚಾರ ಸಂಕಿರಣ)

ಸ್ವಾಮಿದೇವನೆ ಲೋಕಪಾಲನೆ

ಹನುಮಜ್ಜ–ನಿಮಗೆ ಗೊತ್ತಿದೆಯಲ್ಲಾ, ಜಿಲ್ಲಾ ಮಟ್ಟದ ಅಪ್ರತಿಮ ಸಾಹಿತ್ಯ ಚಾಕರ ಸಿಕ್ಕೊಡನೆ ಭೈರಿಗೆ ಆರಂಭಿಸಿದ. ಭೈರೂತ್, ಟ್ರಿಪೋಲಿ, ಗಾಜಾ, ಸಿನಾಯ್, ಇರಾಕ್ ಇರಾನ್‌ಗಳಲ್ಲಿ ಈಚೆಗೆ ಹಾರಿದ ಗುಂಡುಗಳ ಸುರಿಮಳೆಯನ್ನು ಮೀರಿಸುವ ಪ್ರಶ್ನೆಗಳ ಸುರಿಮಳೆ.

"ನೀನು ದೇವರನ್ನು ನಂಬುವ ಮೂಢನಲ್ಲವೇ ದೇವರು ಧರ್ಮ ಎನ್ನುವ ಅಫೀಮನ್ನು ಮಾರಾಟಮಾಡಿಯೇ ನೀನು ಯುರೋಪ್, ಮಧ್ಯ ಪ್ರಾಚ್ಯಗಳಲ್ಲಿ ಮಧ್ಯ ಯುಗದ ಕಾಲದಿಂದ ರಕ್ತದ ಹೊಳೆಯನ್ನು ಹರಿಸುತ್ತಿಲ್ಲವೇ ? ನೀನು ಮೋಸಗಾರ ಬಾಬಾಗಳ ಬೆಂಬಲಿಗನಲ್ಲವೇ ? ನೀನು ನವ ಗ್ರಹ ಹೋಮ ಮಾಡಿಸಲಿಲ್ಲವೇ ? ವಿಜ್ಞಾನದ ಗಂಧವನ್ನೂ ಅರಿಯುದವನಲ್ಲವೇ ? ದೇವರು ಸರ್ವಶಕ್ತನಾಗಿದ್ದರೆ ಇಂಥ ದರಿದ್ರ ಸೃಷ್ಟಿಯನ್ನೇಕೆ ಸೃಷ್ಟಿಸಿದ ? ಕರುಣಾಶಾಲಿಯಾಗಿದ್ದರೆ ಇಷ್ಟೊಂದು ವೈಷಮ್ಯವೇಕಿದೆ? ಎಮರ್ಜನ್ಸಿಯಲ್ಲಿ ನೀನೇನುಮಾಡುತ್ತಿದ್ದೆ? ವಿಚಾರವಾದಿಗಳು, ಪವಾಡಗಳು ಸುಳ್ಳೆಂದು ತೋರಿಸಿದ ಷೋಗೆ ಟಿಕೆಟ್ಟನ್ನೇಕೆ ಕೊಳ್ಳಲಿಲ್ಲ ? ನೀನು ರೆಲೆವೆಂಟ್ ಸಾಹಿತ್ಯ ಸೃಷ್ಟಿ ಮಾಡಿದ್ದರೆ ನಾನು ನಿನಗೆ ಹಣ ಕೊಡಿಸಬಲ್ಲ ಸ್ಥಿತಿಯಲಿಲ್ಲವೆಂದು ಭಾವಿಸಿದೆಯಾ ? ಹಿಂದಿನಕಾಲ ಮುಗಿದು ಹೋಯಿತು, ಇದು ಅ ಧರ್ಮ, ನಿರ್–ಧರ್ಮಯುಗ, ಅ–ದೇವ ಅ-ಸುರಯುಗ ಎಂದು ನಿನಗೆ ತಿಳಿವುದಾದರೂ ಎಂದು ?"

ನಾನು ಟ್ರಿಪೋಲಿ ಬೈರೂತ್‌ಗಳ ಜನ ಸಾಮಾನ್ಯರಂತೆ ಈ ದಾಳಿಯನ್ನು ಮೂಕನಾಗಿ ಅನುಭವಿಸಿದ.

"ಏನಜ್ಜಾ, ಯಾವಾಗ ಯಾಕೆ ಬಂದೆ?" ಎಂದು ಕೇಳಿದೆ. "ದೇವರು ಇದ್ದರೆ ಯಾಕೆ ಕಾಣುವುದಿಲ್ಲ?" ಎಂದನವ. "ಏನೋ ಆಗಿದೆ ನಿನಗೆ? ನಿನ್ನ ಅಳಲನ್ನು ತೋಡಿಕೋ" ಎಂದೆ.

"ನನ್ನ ಚಿಕ್ಕಪ್ಪನ ಪಕ್ಕದ ಮನೆಯವರ ಮಗನಿಗೆ ಸೀರಿಯಸ್, ಆಸ್ಪತ್ರೆಯಲ್ಲಿ ವಾರ್ಡಿಲ್ಲ ವಂತೆ, ಏನು ಮಾಡಲಿ ?"
"ಕೋಟೆ ಆಂಜನೇಯನಿಗೆ ಹತ್ತುರೂ, ಕಾಣಿಕೆ ತೆಗೆದಿಡು. ಆಸ್ಪತ್ರೆಗೆ ಹೋಗು." ಎಂದೆ.

ನನಗೆ ಮುಡುಪಿನ ಹತ್ತು ರೂಪಾಯಿ ಕೊಟ್ಟು, ಆಸ್ಪತ್ರೆಗೆ ಹೋಗಿ ರೋಗಿಯನ್ನು ವಾರ್ಡಿಗೆ ಸೇರಿಸಿ ಬಂದ. ನನಗೊಂದು ಗುಟ್ಟು ಹೇಳಿಕೊಟ್ಟ.

"ದೇವರನ್ನು ಗಾಸಿ ಗೊಳಿಸಲಾರಂಭಿ ಸಿದರೆ ಸಾಹಿತ್ಯ ಬಾಲ ಬೆಳೆಸಬಹುದು. ನಮ್ಮ ಸಾಹಿತ್ಯ ಸಾಮ್ರಾಟರಿಗಂತೂ ಈ ರೆಲೆವೆನ್ಸಿಯನ್ನು ಕಂಡರೆ ಪ್ರೀತಿ. ಬಾ ದೋಸೆಕೊಡಿಸು ಬದುಕುವ ಮಾರ್ಗ ತೋರಿಸುತ್ತೇನೆ."

ದೋಸೆ ತಿನ್ನುತ್ತಾ ಮತ್ತೆ ಆರಂಭಿಸಿದ.
"ದೇವರಿದ್ದರೆ ಏಕೆ ಕಾಣಿಸುವುದಿಲ್ಲ ?"
"ಅಜ್ಜಾ, ಅವನು ಅಪ್ರಮೇಯ ಅಂತಾರೆ"
"ಏನ್ಹಾಂಗಂದ್ರೆ ? ಹುಚ್ಚುಚ್ಚು ?"

"ನೋಡಜ್ಜಾ ದೇವರು ಶಬ್ದಾದಿರಹಿತ ನಾದ್ದರಿಂದ ಪ್ರತ್ಯಕ್ಷಕ್ಕೂ, ವ್ಯಾಪ್ತಲಿಂಗವಾದ್ದ ರಿಂದ ಅನುಮಾನಕ್ಕೂ, ಭಾಗರಹಿತನಾದ್ದ ರಿಂದ ಉಪಮಾನಕ್ಕೂ, ಅನುಪಪದ್ಯಮಾನ ವಾದ್ದರಿಂದ ಅರ್ಥಾಪತ್ತಿಗೂ, ಸತ್ತಾಮಾತ್ರ ನಾದ್ದರಿಂದ ಅಭಾವಕ್ಕೂ, ಪ್ರಮಾಣಜನ್ಯ ಅತಿಶಯವಿಲ್ಲವಾದುದರಿಂದ ಶಾಸ್ತ್ರಪ್ರಮಾ ಣಕ್ಕೂ ಅತೀತನಂತೆ."
"ಯಾತ್ಯಾತರಾ ತಿಳೀಲಿಲ್ಲ. ಯಾರ್ನೋ ಮಾತು ಹೇಳ್ತಾ ಅದಿ,"
"ನೀನು ಏನನ್ನೂ ಅಧ್ಯಯನ ಮಾಡಿಲ್ಲ, ತಿಳಿದುಕೊಳ್ಳಕ್ಕೆ ಇಷ್ಟಾನೂ ಇಲ್ಲ. ಯಾರೊದ್ದೊ ಮಾತು ಕೇಳ್ತಾ ಅದಿ ಅದಕ್ಕೆ ದೇವರು ಇಲ್ಲಾ ಅಂತಿ."
ಹನುಮಜ್ಜ "ನಿಂದು ಮೂಢನಂಬಿಕೆ" ಅಂದ,
"ನನ್ನ ನಂಬಿಕೆ ಸುದ್ದಿ ಇಲ್ಲ. ನಿನ್ನ ಪ್ರಶ್ನೆಗೆ ಉತ್ರ ಅಷ್ಟೇ."
ಇದನ್ನೆಲ್ಲಾ ಬಿಟ್ಟು ಏನಾರ ರೆಲೆವೆಂಟ್ ಬರ್ಕೊಡು." ·

"ನಾನು ಬರೆಯೋದೆಲ್ಲಾ ರೆಲೆವೆಂಟ್ ನನಗೆ ನಿನಗೆ ಅನರ್ಯಾರೊ ಹೇಳಿದ್ದು ರೆಲೆವೆಂಟ್" ಇಂಥಾ ಮರ ಗಿಣಿ ಮಾತುಗಳನ್ನು ಕೇಳಿ ನನ್ನ ಮನಸ್ಸು ದಡ್ಡು ಬಿದ್ದಿದೆ ಎಂದು ಭೋಗಾನಂದರ ಕತೆ ಹೇಳಿದೆ.

ಇನ್ನು ನಮ್ಮ ಶ್ರೀ ಶ್ರೀ ಭೋಗಾನಂದರ ವಿಷಯ ಅಷ್ಟು ನಿಮಗೆ ತಿಳಿಯಬೇಕು, ಅವರು ನಮ್ಮೂರಿನಿಂದ ಒದೆತಿಂದು ಓಡಿ ಹೋದಾಗ ಆ ಭವ್ಯದೃಶ್ಯವನ್ನು ಕಣ್ಣಾರೆ ನೋಡಿದವರಲ್ಲೊಬ್ಬ ನಾನು. ಗತಕಾಲ ಲಯಕಾಲವಾಯವಾಯ್ತು. ಈಗ ಭೋಗಾ ನಂದರು ನಾಡಿನ ಸೂಪರ್ - ಡೂಪರ್ ಸ್ವಾಮಿಗಳಲ್ಲೊಬ್ಬರು. ಅವರನ್ನು ಒದ್ದವರ ಮಕ್ಕಳು ಈಗ ಅವರು ಆರಂಭಿಸಿರುವ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜು ಗಳಿಗೆ ಒಳಲಂಚ, ಕ್ಯಾಪಿಟೇಷನ್, ಕೊಸರು ಎಲ್ಲಾ ಕೊಟ್ಟು ಸೇರಿಕೊಂಡು, ಓದದೆ, ಡಾಕ್ಟರು ಇಂಜನಿಯರುಗಳು ಆಗಿ ಎಂ.ಬಿ, ಬಿ. ಎಸ್. (ಎಂವೈಎಸ್), ಬಿ.ಇ. (ಬಿಎವ್ನ್) ಅಂತ ಬೋರ್ಡ್ ಹಾಕಿಕೊಂಡಿದ್ದಾರೆ.

ಏಕೆಂದರೆ ನಮ್ಮೂರಿನ ಎಂ. ಬಿ. ಬಿ. ಎಸ್. ಡಾಕ್ಟರ ಬಳಿ ಯಾರೂ ಚಿಕಿತ್ಸೆಗೆ ಹೋಗುವುದಿಲ್ಲ.

ಇದೀಗ ಕ್ಯಾಪಿಟೇಷನ್ ರದ್ದಿಯಾಗಿ ಮಾತ್ರಂ ತಮ್ಮ ಫ್ಯಾಷನ್ ಆಗಿರುವುದರಿಂದ ಸ್ವಾಮಿಗಳು ತಮ್ಮ ಶ್ರೀ ಮಠದ ಶ್ರೀ ಅಭಿವೃದ್ಧಿ ಹಾಗೂ ಒರತೆ ನೀರಿನಂತೆ ಶ್ರೀ ಧಾರೆ ಹರಿಸುವ ಯೋಜನೆಯಲ್ಲಿ ಮಗ್ನರು. ಆದರೆ ಅವರು ಇಂಗ್ಲೀಷಿನಲ್ಲಿ ಹೇಳಿದ ಹಾಗೆ 'Fast un' ಅಂದರೆ ಕ್ಷಿಪ್ರಸಾದಕರು. ರಾಸಭೇಶ್ವರ ದೇವಾಲಯ ನಮ್ಮೂರಿನ ಪುರಾಣೇತಿಹಾಸ ಪ್ರಸಿದ್ಧ ಸ್ಥಳ. ಅದಕ್ಕೆ ಆನತಿ ದೂರದಲ್ಲಿರುವ ದೇವಾಲಯದ ಹೊಲದಲ್ಲಿ ಭೋಗಾನಂದರ ಸಪ್ತತಾರಾ ಹೋಟಲೊಂದಕ್ಕೆ ಗುದ್ದಲಿ ಪೂಜೆ ಮಾಡಿಸಿಬಿಟ್ಟರು. ಇದರಿಂದ ನಮ್ಮೂರ ಪ್ರವಾಸಿ ಕೇಂದ್ರವಾಗುವುದಲ್ಲದೆ, ಕಲರ್ ಟಿ. ವಿ. ಕ್ಯಾಬರೆ, ಸ್ವಿಮ್ಮಿಂಗ್‌ಪೂಲ್, ಮಲ್ಟಿ ಚಾನಲ್ ಮನೋರಂಜನೆಗಳು ಸ್ವಾಮಿಗಳಿಗೆ ಪುಕ್ಕಟೆ ದೊರೆಯುತ್ತವೆ. ಸಂಸ್ಕೃತಿ ಸೇವೆ, ದೇವಾಲಯದ ಜೀರ್ಣೋದ್ಧಾರ, ಬಾಹ್ಯಾಕಾಶ ಸಂಸ್ಕೃತಿಯ ಆಗಮನಗಳೂ ಸಾಧ್ಯವಾಗುತ್ತವೆ. ಹೆಲಿಪ್ಯಾಡ್, ಫ್ಲೈಯಿಂಗ್ ಸಾಸರ್ ಪ್ಯಾಡ್‌ಗಳನ್ನೂ ನಮ್ಮ ಜನ ನೋಡಿದಂತಾಗುತ್ತದೆ. ಏಕ್ದಂ ಧಿಡೀರ್ ಪ್ರಗತಿ ಮನುಕುಲದ ಉದ್ಧಾರ. ಇನ್ನೂ ಏನೇನೋ.

ರಾಸಭೇಶ್ವರ ದೇವಾಲಯದ ಧರ್ಮದರ್ಶಿಗಳು ಕೋರ್ಟಿಗೆ ಹೋದರು. ಸ್ವಾಮಿಗಳ ಲಕ್ಷಗಳೆದುರು ಅವರ ಐನೂರು ಸಾವಿರ ನಡೆಯಲಾರವು ಎಂದು ಹಿತೈಷಿಗಳು ಹೇಳಿದರು. ಆಗ ಕಾರ್ಯದರ್ಶಿ ಸ್ವಾಮಿಗಳ ಬಳಿಗೆ ನಿಯೋಗ ಹೋಗಬೇಕೆಂದು ನಿರ್ಣಯವಾಯಿತು. ಆತ ನನ್ನನ್ನೂ ಕರೆದೊಯ್ದ, ಆ ಕತೆಯನ್ನೇ ಹನುಮಜ್ಜನಿಗೆ ಹೇಳಿದ್ದ:

"ನಾವು ಹೋದೊಡನೆ ಸ್ವಾಮಿಗಳು ನೆಪತಪಕ್ಕೆ ಕುಳಿತರು. ನಾನು ಹೋಗಿ ಸ್ವಾಮಿಗಳ ಕಿವಿಯಲ್ಲಿ 'ರಾಸಭ' 'ರಾಸಭ' ಎಂದೊಡನೆ ಅವರು ಬಹಿರ್ಮುಖರಾದರು. ಕಾರ್ಯದರ್ಶಿ "ಏನು ಬುದ್ಧೀ ನೆಪ್ಪೈತೇ ? ಎಂದು ಕೇಳಿದ.

ಸ್ವಾಮಿಗಳು "ಹಿಹಿಹಿ .... ನೆಪ್ಪಿಲ್ದೆ ಏನು?" ಎಂದರು.

ಕಾರ್ಯ "ಹಂಗಾರೆ ನಾನು ಯಾರು ಹೇಳ್ರಿ ?" ಎಂದ.

ಸ್ವಾಮಿ "ಹಿಹಿಹಿ.... ನೀವು ..ಹಿಹಿಹಿ..."
ಕಾರ್ಯ "ನಿಮ್ಮನ್ನ ಒದ್ದು ರಸ್ತೆ ಮಧ್ಯೆ ಬಿಸಾಕಿದ್ರಲ್ಲಾ ಆಗ ನಿಮ್ಮ ಬಾಯೊಳಗೆ ನೀರು ತಂದ ಹೊಯ್ದ ...... ಮಗ ನಾನು."
ಸ್ವಾಮಿಗಳ ಮೌನವೇ ಅದಕ್ಕೆ ಪ್ರತಿಕ್ರಿಯೆ.

ಕಾರ್ಯ "ನಿಮ್ಮ ಸಂಸ್ಥೆ ಹೆಸರು ರಾಸಭ ಫೌಂಡೇಷನ್, ನಿಮ್ಮ ಮಠದ ಧ್ವಜ ರಾಸಭ ಧ್ವಜ, ಮಾತೆತ್ತಿದರೆ ರಾಸಭೇಶ್ವರನ ಕರುಣೆ ಮುಖ್ಯ ಅಂತೀರಿ, ಈಗ ಗುಡಿ ಹೊಲದೊಳಗೆ ನಿಮ್ಮ ಸೆವೆನ್ ಸ್ಟಾರ್ ಹೋಟಲು ಕಟ್ತಾ ಇದಿರಿ...... ಏನು ಬುದ್ದೀ ಇದು, ದುರ್ಬುದ್ಧಿ ಕಲ್ಸ ?"
ಭೋಗಾನಂದರ ರುದ್ರ ಗಭೀರ ಮೌನ ಮುಂದುವರಿಯಿತು.

ಕಾರ್ಯ "ದೇವ್ರುಗಳು ಬುದ್ಧೀ, ಕುಷ್ಠರು ಪುಗ್ಸಟ್ಟೆಕೊಟ್ರು ಅಂತ ಪಾಲಿಡಾಲ್ ಕುಡಿತಾರೇನ್ರಿ ? ರಾಸಭೇಶ್ವರನ ಸ್ವತ್ತು ಬುದ್ಧೀ, ಹಾಲಾಹಲ ವಿಷ."
ಶ್ರೀಶ್ರೀ ಭೋಗಾನಂದರು ತಿರಸ್ಕಾರದ ಕಿರುನಗೆ ನಕ್ಕು ಹೇಳಿದರು.

"ಇದು ರಾಸಭಪ್ರೇರಣೆ, ಎಲ್ಲಿದ್ದಾನೆ ಈಶ್ವರ, ರಾಸಭೇಶ್ವರ ? ಕಲ್ಲಿನಲ್ಲೇ ? ಅಲ್ಲ ಜನರ್ ದನರಲ್ಲಿ ಶಿವನಿದ್ದಾನೆ. ಎಲ್ಲಿ ರಾಸಭ? ಗುಡಿಯಲ್ಲಿದ್ದಾನೆಯೇ ? ಖಂಡಿತ ಇಲ್ಲ. ನಾನೇ ರಾಸಭ; ಎದ್ದು ಹೊಂಟ್ಹೋಗ್ತಿರು".
ತ್ರಿಪುರಾ ಸುಂದರರು, ದಂಭೋದ್ಭವ, ವೃತ್ರ, ತಮ, ಕಾಲನೇಮಿ, ರಾವಣ ಅವರನ್ನೇನು ಮಾಡಿದ ದೇವರು ? ಕೊಂದ. ಅಷ್ಟೇ ತಾನೇ ? ಅವನು ಕೊಲ್ಲದಿದ್ದರೂ ಅವರು ಸತ್ತೇಸಾಯುತ್ತಿದ್ದರು.

ಹನುಮಜ್ಜನನ್ನು ಏನು ಮಾಡಿದ್ದಾನೆ ದೇವರು ? ಭೋಗಾನಂದರನ್ನು ? ಅದಕ್ಕೇ ಅವನನ್ನು 'ಪ್ರಕೃಂತಾನಾಂಪತಿ' 'ಸ್ತೇನಾನಾಂ ಪತಿ' ಎಂದು ಕರೆದದ್ದು."
ಈಶಣ್ಣ ಮಂಡಿಸಿದ ವಾದವನ್ನೂ ಹನುಮಜ್ಜನಿಗೆ ತಿಳಿಸಿದೆ.

"ಈ ಜಗತ್ತಿನ ಸೃಷ್ಟಿ ಆಕಸ್ಮಿಕ ಎಂದು ಕೆಲವರು ಹೇಳುತ್ತಾರೆ ನಿಜ. ಆದರವರು ಮನುಷ್ಯ ಜೀವನದ ಬಗೆಗೆ ಅತೀವ ಕಳವಳ ವ್ಯಕ್ತಪಡಿಸುತ್ತಾರೆ. ಕೃತಿ ಮಾತ್ರ ಬೇರೆ ರೀತಿ. ತಮ್ಮಲ್ಲಿ, ತಮ್ಮ ಮಾತಿನಲ್ಲಿ ಮಾನವಕುಲಕ್ಕೆ ನಂಬಿಕೆ ಇಲ್ಲ ಎಂಬ ಕಾರಣದಿಂದಲೇ ಕಳವಳ ಉಂಟಾಯಿತೋ ಏನೋ ಗೊತ್ತಿಲ್ಲ. ಆಕಸ್ಮಿಕದಿಂದದ್ದು ಆಕಸ್ಮಿಕವಾಗಿ ಹುಟ್ಟಿದ್ದು ತಮ್ಮ ವ್ಯವಸ್ಥಿತ ಪ್ರಯತ್ನದಿಂದ ಉದ್ದೇಶಪೂರ್ವಕವಾಗಿಯೇ ಹಾಳಾಗಬೇಕು ಎಂಬ ಧೃಢ ನಿರ್ಧಾರ ಕೈಗೊಂಡಿರುವವರ ವಿರುದ್ಧ ಚಕಾರವನ್ನು ಎತ್ತದ ಮಾತು ಕಂಜೋರ್ ಮನೋಭಾವದ್ದು ಎನ್ನುವುದೂ ಆಕಸ್ಮಿಕ. ಕಾರಣವಿಲ್ಲದೆ ಕಾರ್ಯವಿಲ್ಲ. ಸೃಷ್ಟಿ ಹೇಗೆ ಏಕೆ ಆರಂಭವಾಯಿತು ಎನ್ನುವುದಕ್ಕೆ ಅವರಲ್ಲಿ ಉತ್ತರವಿಲ್ಲ. ಮೊದಲು ಗುರುತ್ವಾಕರ್ಷಣದಿಂದಲೇ ಯಾಂತ್ರಿಕವಾಗಿ ನಡೆಯುತ್ತಿದ್ದುದ್ದು ಈಗ ಸಾಪೇಕ್ಷವಾದಂತೆ ನಡೆಯುತ್ತಿದೆ - ಈ ಜಗತ್ತು. ಮೊದಲು ರಾಜ್ ಕಪೂರ್, ದಿಲೀಪ್‌ಕುಮಾರ್, ಆಮೇಲೆ ರಾಜೇಶ್‌ಖನ್ನ, ಬಳಿಕ ಅಮಿತಾಬ್, ಈಗ ಮತ್ತೆ ರಾಜೇಶ್ ಅಥವಾ ಇನ್ನೊಬ್ಬ ಇದೇಂಥಾ ಸಮಯ ಸಾಧಕತನ ? ಅದವರಿಗೆ ಏಕೆ ಹೊಳೆಯುತ್ತಿಲ್ಲ. ಪರಮಾಣುಬಾಂಬ, ಒಡ್ಡಿರುವ ಅಪಾಯ, ಕೈಗಾರಿಕೆಗಳಿಂದ ವಿಷಾನಿಲಗಳಿಂದ ಬುಡಮೇಲಾಗಿರುವ ಪರಿಸರ ಆದೇನೂ ಅವರಿಗೆ ಬೇಕಾಗಿಲ್ಲ. ಶ್ರೀಮಠದ ಆದಾಯವೊಂದೇ ಹೇಗೆ ಶ್ರೀ ಶ್ರೀಗಳಿಗೆ ಮುಖ್ಯವೋ ಇವರಿಗೂ ತಮ್ಮ ಮಾತಿಗೆ ಸಿಗುವ ಮನ್ನಣೆ ಮುಖ್ಯ. ಬಲವಂತದಿಂದಲೋ ಇನ್ನೇತಕ್ಕೋ ತಮ್ಮನ್ನು ಕೇಳುವ, ತಮ್ಮ ಜುಟ್ಟು ಹಿಡಿದವರಿಗೆ ಇವರೇಕೆ ವೈಜ್ಞಾನಿಕ ಮನೋಭಾವ ಬೋಧಿಸಬಾರದು ? ಉಳಿದವರಿಗೆ ಬೋಧಿಸುವ ಈ ವೈಖರಿ ಜಾಹೀರಾತು ಪ್ರಚಾರಕ್ಕಿಂತ ಯಾವ ರೀತಿಯಲ್ಲಿ ವಿಭಿನ್ನ. ?

ಹೀಗೇನಾದರೂ ಕೇಳಿದರೆ ಕೊನೆಯಿಲ್ಲದ ವೈಯಕ್ತಿಕ ದ್ವೇಷವನ್ನು ಕಟ್ಟಿಕೊಳ್ಳಬೇಕಾದೀತೇ ಹೊರತು ಇನ್ನೇನೂ ಇಲ್ಲ."

ಈ ಪ್ರಶ್ನೆಗಳನ್ನು ಮಂಡಿಸಿದಾಗ ಹನುಮಜ್ಜ ಹೇಳಿದ್ದು "ನನಗೆ ಬದುಕುವ ದಾರಿ ಗೊತ್ತಿಲ್ಲ. ಹೀಗೆ ಲಾಟ್ರಿ ಹೊಡೆಯುತ್ತಿರುವುದೇ ನನ್ನ ಹಣೇಬರಹ."

ನಾನಂದಿದ್ದು "ಹಣೇಬರಹ ಅವೈಜ್ಞಾನಿಕವದ. ಅದನ್ನು ಸರಿಯಾಗಿ ವಿಶ್ಲೇಷಿಸು. ನೀನು ವಿಶ್ಲೇಷಿಸುತ್ತಾ ಇರು ಇರು. ಬದುಕು ತನ್ನಷ್ಟಕ್ಕೆ, ತನ್ನ ಹಾಗೇ ಸಾಗುತ್ತದೆ."

ಇಂಥಾ ಚರ್ಚೆ ಅನಗತ್ಯವೆಂದು ನಾನು ಮೊದಲೇ ಹನುಮಜ್ಜನಿಗೆ ಹೇಳಿದ್ದರೂ ಈಗ ಸಿಕ್ಕಿ ಹಾಕಿಕೊಂಡಿದ್ದೆ- ಒಣಚರ್ಚೆಗೆ ಆದರೆ ಹನುಮಜ್ಜ ಇದನ್ನೆಲ್ಲಾ ಗಮನಿಸುವ ಸ್ಥಿತಿಯಲ್ಲಿರಲಿಲ್ಲ. ಸಾಹಿತ್ಯ ಚಾಕರಿಗೆ ಎಷ್ಟು ಬೇಕೋ, ಏನು ಲಾಭದಾಯಕವೋ, 'ಅವರು' ಏನನ್ನು ಹೇಳುತ್ತಾರೋ ಅದನ್ನೇ ಜಪಿಸುವವ.

ಕಾವಿನಿಂದ ಹೇಳಿದೆ "ಜಗತ್ತನ್ನು ಶಾಂತಿಗೆ ದಬ್ಬಲೆಂದು ಪರಮಾಣು ಅಸ್ತ್ರ, ಕ್ಷಿಪಣಿ, ರಾಕೆಟ್‌ಗಳನ್ನು ಸೃಷ್ಟಿಸಿದರು. ಬಂಡವಾಳಶಾಹಿಗಳಿಗೂ, ಸಮತವಾದಿಗಳಿಗೂ ದಾಸರಾದರು. ಅವರ ಮಾತನ್ನು ಕೇಳಲು ನಮಗೆ ಹೇಗೆ ಸಾಧ್ಯ ? ಈಗ ಏನಂತಾರೆ ಗೊತ್ತೆ ? ಪರಮಾಣು ಯುದ್ಧವಾದರೆ ಪೂರಾ ನಾಶವೇನೂ ಆಗುವುದಿಲ್ಲವಂತೆ. ಶೇಕಡಾ ಐವತ್ತು ಮಾತ್ರ ನಾಶವಂತೆ, ಉಳಿದವರಿಗೆ ಈ ಜಗತ್ತಿನಲ್ಲಿ ಯಥೇಷ್ಟವಾಗಿ ಭೋಗ ಸಾಮಗ್ರಿ ದೊರೆಯುತ್ತದಂತೆ."

ಹನುಮಜ್ಜ ಮತ್ತೆ ಮೂಲ ಪ್ರಶ್ನೆ ಕೇಳಿದ, "ಹಾಗಂದರೆ ದೇವರು ಅದನೆ ಅನ್ನು."

"ಅವನಿಗೇ ಗೊತ್ತು ಹನುಮಜ್ಜ."

"ನೀನೇನಂತಿ ಹೇಳು."

"ಇದು ವೈಯಕ್ತಿಕ ಪ್ರಶ್ನೆ ನೋಡು ಇದು ವಿಚಾರಕ್ಕೆ ಸಾಮಗ್ರಿ, ಚಾರ ಅಂದ್ರೆ ಈ ಇಂದ್ರಿಯಗಳ ಓಂದೆ ಚರಿಸುವುದು. ವಿ ಎಂದರೆ ಅದರಿಂದ ವಿಮುಖವಾದದ್ದು ದಿನಾ ನಿದ್ದೆ ಮಾಡುತ್ತೀಯಲ್ಲ ಅಗ ವಿಜ್ಞಾನ, ಅವಿಜ್ಞಾನ ಯಾತರದ್ದೂ ಇರಲ್ಲ- ಓಟು ಹಾಕ್ಬೇಕಾದ್ರೆ ಮತಿವರ್ಗ ಯಾತರದ್ದೂ ಹೆಂಗಿರಲ್ಲೋಹಂಗೆ, ಎದ್ದ ಮ್ಯಾಲೆ ಹತ್ತಿತು ರಂಪ- ಆ ಸರ್ಕಾರ ಹೋಗತನ್ಕ ಹತ್ತುವ ರಂಪ. ಮತ್ತೆಲೆಕ್ಷನ್ – ಮತ್ತೆ ರಂಪ.

ಹಾಗೇ ಈ ಜಗತ್ತು ಬೇಕಾದ್ರೆ ಅದನ್ನು ಬಿಟ್ಟು ದೇವರ ಹಾಗೆ ತೆಪ್ಪಗಿರಬೇಕು. ಅದು ಬಿಟ್ಟು- ನಂಗೇನೂ ಗೊತ್ತಿಲ್ಲ ದೇವ್ರುವಿಷಯ ನಾನು ಇಗ್ನಾನ ವಿಗದ, ಆ ಸಾರವಾದಿ; ನಂದು ನಡಿತಾ ಐತೆ ಅಂತ ಸುಮ್ನಿರಬೇಕು. ಬದಕಿರತಂಕ ಒದರ್‍ತಿ, ಅಷ್ಟೆ ತಾನೇ ? ದೇವರು ಹೇಗಿದ್ದಾನೆ. ದೇವರು ಅಂದ್ರೇನು, ದೇವರ ದಯ ಅಂದ್ರೇನು ಅವೆಲ್ಲ ಗೊತ್ತಿರರ ಹತ್ರ ಹೋಗಿ ಅದನ್ನು ತಿಳ್ಕಬೇಕು.

ಮೇಷ್ಟ್ರು ಬರ್ಸಿದ ನೋಟ್ಸ್ ಉರು ಹೊಡ್ಕೆ, ಪಾಸಾಗಿ ಅದನ್ನೇ ಬರ್‍ಸೋ ಮೇಷ್ಟ್ರಾಗ ಬಾರ್‍ದು; ದೇವ್ರು ಸುದ್ದಿ ತಿಳ್ಕಂಬಕ್ಕೇ ಟ್ರೈ ಮಾಡ್ದೆ, ಅದೊಂದು ಮೂಢ ನಂಬಿಕೆ ಅನ್ನೊ ಹೆಡ್ಡ ಶಿಕಾಮಣಿ ಹತ್ರ ನಂಗೇನು ವಾದ ಹನುಮಜ್ಜ. ?"

ದೋಸೆ, ಕಾಫಿ ಎಲ್ಲಾ ಮುಗಿದಿತ್ತು. ಹನುಮಜ್ಜ "ಹಂಗಾರೆ ದೇವ್ರುನ್ನ ತಿಳ್ಕಂಬುದು ಹೆಂಗೆ ?" ಅಂದ. ನಾನು ತಲೆ ಕೆರೆದು

ಕೊಂಡೆ. ಏನೂ ಹೊಳೆಯುಲಿಲ್ಲ. ಆಹಾ ! ಸ್ಫೂರ್ತಿ ಬಂದೇ ಬಿಟ್ಟಿತು ! !
"ಅರೇ, ವಿಜ್ಞಾತಾರಂ, ಕೇನವಿಜಾನಾತಿ ?" ಎಂದೆ.
"ಯಾತರ್ದ್ದೋ ಇದು, ಸಂಸ್ಕೃತ. ಬ್ರಾಹ್ಮಣರ ಭಾಷೆ, ಪ್ರಗತಿ ವಿರೋಧಿ. ಪುರೋಹಿತ ಶಾಹಿ ಕೋಟೆ ?" ಎಂದ. ನಾನಂದೆ 'ಕರೆಕ್ಟ್ ನೋಡಜ್ಜಾ, ವಿಚಾರವಾದ ಅಂದರೆ ಇದು !"

ಹೋಟೆಲಿನ ಬಿಲ್ಲು ನಾನೇಕೊಟ್ಟೆ. ಆಂಜನೇಯನ ಗುಡಿಗೆ ಹೋಗಲು ಆಟೋ ರಿಕ್ಷಾದ ಬಾಡಿಗೆ ಹನುಮಜ್ಜನೇತೆತ್ತ.

—ಜೀಡಿ

ವೈದ್ಯರಲ್ಲಿ ವಿಷವಿಮಿಷಗಳು

"ಡಾಕ್ಟ್ರೇ, ನಿಮ್ಮ ಕೈಲಿ ನಮ್ಮ ನರಗಳಲ್ಲಿ ಓಡಾಡ್ತಿರೋ ರಕ್ತಾನ ನಿಲ್ಸೋಕಾಗುತ್ತೆ?"

"ಛೆ ! ಹೇಗಾಗುತ್ತೆ?

"ಸರಿ ಡಾಕ್ಟ್ರೆ – ನಿಂಬಿಲ್ಲನ್ನ ಮುಂದಿನ ತಿಂಗಳು ಕೊಡ್ತೇನೆ – ಈ ಸಾರಿ ಲೈಟ್‌ಬಿಲ್ ಜಾಸ್ತಿಯಾಗಿದೆ."

"ಕೀರ್ತಿ"

ಮಂದಾರ-4

ಇಲ್ಲಿಯವರೆಗೆ

[ಮಂದಾರ ಕಾಲೇಜಿನಲ್ಲಿ ನಡೆಯಲಿದ್ದ ಯುಗಳಗಾಯನ ಸ್ಪರ್ಧೆಯಲ್ಲಿ ಜಯಶಾಲಿಯಾಗಿ ಭಾರತದ ಪ್ರಥಮ ಹಿನ್ನೆಲೆ ಗಾಯಕಿಯಾಗಲು ಹವಣಿಸಿದ್ದಳು, ಹ್ಯಾಂಲೆಟ್ ಅವಳ ಜೊತೆಗಾರನಾದರೆ ಅದು ಸಾಧ್ಯ. ಹ್ಯಾಂಲೆಟ್ ಅವಳನ್ನು ಕೇಳಲೊಲ್ಲ. ಸೆಕ್ರೆಟರಿ ರಾಜೀವನಿಗೆ ಮಂದಾರನ ಆಯ್ಕೆ ಇಷ್ಟವಿಲ್ಲ. ಅವಳ ಗೆಳತಿ ಪ್ರಭಾ ರಾಜೀವನನ್ನು ಬುಕ್ ಮಾಡಲು ಇಚ್ಛಿಸಿ ಪ್ಲ್ಯಾನ್‌ಒಂದನ್ನು ಹಾಕಿದ್ದಳು. ಒಥೆಲೋ ಅದನ್ನು ಕದ್ದು ಕೇಳಿ ಪ್ರಿನ್ಸಿಪಾಲರಿಗೆ ಹೇಳಿದ.]

ಪ್ರಿನ್ಸಿಪಾಲರ ಕೋಣೆಯಿಂದ ಹೊರಟ ರಾಜೀವನಿಗೆ ಪ್ರೊ. ಶೇಖರ್ ಹೇಳಿಕಳಿಸಿದರು. ಅವರ ಬಾಲ್ಯಮಿತ್ರ ಆದಿನ ಬೆಂಗಳೂರಿನಿಂದ ಬಂದಿದ್ದನಂತೆ. ಅವನು ಪ್ರಿನ್ಸಿಪಾಲರನ್ನು ನೋಡಬೇಕಿತ್ತಂತೆ. ಆದ್ದರಿಂದ ಕಾಂಪಿಟಿಷನ್ ಆರಂಭವಾಗುವ ಮೊದಲೇ ತಾವು ಪ್ರಿನ್ಸಿಪಾಲರನ್ನು ಕಂಡು ನಂತರ ಸ್ವಂತದ ಕೆಲವು ಜರೂರು ಕೆಲಸಗಳಿಗೆ ಕಾಲ ವಿನಿಯೋಗಿಸಬೇಕಿದೆ ಎಂದು ತಿಳಿಸಿದರು. ರಾಜೀವನಿಗೆ ಫಜೀತಿಗೆ ಬಂದಿತು. ಪ್ರಿನ್ಸಿಪಾಲರು, ಶೇಖರ್ ಇಬ್ಬರೂ ಬಾರದಿದ್ದರೆ ಸೆಲೆಕ್ಷನ್ ಮಾಡುವ ಕೆಲಸ ಅವನ ಪಾಲಿಗೇ ಬೀಳುತ್ತಿತ್ತು. ಯಾರನ್ನಾರಿಸಿದರೂ ಪಕ್ಷಪಾತದ ದೂರು, ಮನಃಕಲ್ಮಷ, ಇದೇನು ಬಂತು ಎಂದುಕೊಂಡು ಅವನು ಪ್ರೊಫೆಸರ ಮನೆಯಿಂದ ಬರುತ್ತಿದ್ದ ಹಾಗೇ ಹ್ಯಾಂಲೆಟ್ ಕಾಣಿಸಿಕೊಂಡ.

"ಲೋ...... ಮಗನೇ, ಕಾಫಿ ಕುಡಿಯೋಣ ಬಾ" ಎಂದ.

"ಏನೋ ಬಂತಲೇ ನನ್ಗ!" ಎಂದ ರಾಜೀವ. "ಪ್ರಿನ್ಸಿಪಾಲರು ಏನು ಹೇಳಿದರು ಗೊತ್ತೇನೋ ?"

"ಏನಂದ್ರು ?"

"ನನ್ನ ಸೆಲೆಕ್ಷನ್ ಅಷ್ಯೂರ್ಡ್. ನಾನು ಟೆಸ್ಟಿಗೆ ಹೋಗಬೇಕಿಲ್ಲ."

"ಅವರೇನು ಹೇಳೋದು, ನಾನೇ ಹೇಳ್ತಿದ್ದೆ. ಶಿವೂ, ನಿನ್ನ ಬಿಟ್ಟರೆ ಇನ್ನ್ಯಾರಿಗೆ ಸೆಲೆಕ್ಷನ್. ಭೀಮಸೇನ್ ಜೋಷಿ, ರಫಿ, ಲಕ್ಷ್ಮಿಶಂಕರ್, ಲತಾ ಇವರ ಕ್ಲಾಸಿಗೆ ಸೇರಿದೋನು ನೀನು."

"ಹೌದು ಆದರೆ ನನಗೆ ಜೊತೆಯಾರು ?"

"ಯಾಕೆ ರಮಾನ ಕರೆದರೆ ಬರೋದಿಲ್ವೇ?"

"ಇಲ್ಲವೋ? ಆ ಭದ್ರಕಾಳಿ ನನ್ನಂಥ ನರಕುರಿಯನ್ನು ಕರೆಯೋದಿಲ್ಲ, ತನ್ನ ಜೊತೆ ಯಾರಿದ್ರೂ ನಾನೇ ಸೆಲೆಕ್ಟ್ ಆಗ್ತೀನಿ ಅಂತ ತಿಳಿದಿದಾಳೋ ಏನೋ !"

"ವಸಂತ ?"

ಏನು ಮಾಡೋದು ...... ಅವಳಿಗೆ ಓ. ಶಿವು ಪಾರ್ಟ್‌ನರ್ ?"

"ಲೋ ಶಿವು, ಒಂದು ಮಾತು ಹೇಳ್ತೀನಿ ಕೇಳ್ತಿಯಾ ? ರಮಾ, ವಸಂತ ಇವರೆಲ್ಲಾ ಟಾಪ್‌ಕ್ಲಾಸ್ ಸಿಂಗರ್ಸ್. ನೀನು ಕರೆದರೆ ಖಂಡಿತಾ ಒಪ್ತಾರೆ. ಯಾಕೆ ಕೇಳಬಾರದು."
"ಈಗ ಜೊತೆಗಿರೋರು ?"

"ಅಯ್ಯೋ ತಾಳಿಕಟ್ಟಿದ ಗಂಡನ್ನೇ ಉಫ್ ಅಂತ ಊದಿದರೂ ಕೇಳೋರು ದಿಕ್ಕಿಲ್ಲ ಈ ಕಾಲದಲ್ಲಿ, ಇವರು ಹೆಸರು ಕೊಟ್ರೆ ಅದೇನೂ ಫೈನಲ್ ಅಲ್ಲ. ನಮ್ಮ ಕಾಲೇಜು ಗೆಲ್ಲಬೇಕೋ ಬೇಡವೋ, ಸೆಲೆಕ್ಷನ್ ಮಾಡೋರು ಇವರ ಫೀಲಿಂಗ್ಸ್ ಗಮನಿಸೋಲ್ಲ. ಫರ್ಫಾರ್ಮೆನ್ಸ್ ಮುಖ್ಯ. ಮುಂದೆ ಗೆಲ್ಲೋಛಾನ್ಸ್ ಅತಿಮುಖ್ಯವಾದ ಅಂಶ."

"ನನಗೇನೂ ತಿಳಿಯೋದಿಲ್ಲ ರಾಜೀವ."

"ಹೋಗಲಿ ಯಾರಿಗೆ ರೆಕಮೆಂಡೇಷನ್ ಮಾಡೋಣ. ನೀನು ನಮ್ಮ ಸ್ಟಾರ್. ನಿನ್ನ ಅಭಿಪ್ರಾಯಕ್ಕೆ ನಾನಂತೂ ಬೆಲೆ ಕೊಡ್ತೀನಿ "

"ಮಂದಾರ ಬೇಕು."

ಲೋ ಆ ಕ್ಯಾರಿಕೇಚರ್ ಕಟ್ಕೊಂಡು ಏನೋ ನಿನ್ಗೆ. ಇಸ್ಪೀಟ್ ರಾಣಿ ಇದ್ದ ಹಾಗಿದಾಳೆ."

"ಉಶ್. ಬೇಕೋ ರಾಜೀವ........ಮಗನೇ ಇರಲೇಳು, ನಿನಗೆ ಲಾಭ ಏನು ಲುಕ್ಸಾನು ಏನು ?"

"ಅವಳ ಮಂಗಾಟ ನೋಡಿದ್ರೆ ಮೈ ಉರಿಯುತ್ತೆ."

"ಯಾರನ್ನ ನೋಡಿದ್ರೆ ನಿನ್ನ ಮೈ ಉರಿಯೋದಿಲ್ಲ ? ನೀನು ಸ್ತ್ರೀ ದ್ವೇಷಿ, ಮಂದಾರ ಬೇಕು. ಇರಲೇಳು; ಬೇಕುಕಣೋ ಮರಿ ಮಂದಾರ........."

ರಾಜೀವ ನಕ್ಕು "ಪೂ ಹೇಳಿಬಿಡು ಮಂದಾರ ಮೈ ಡಾರ್ಲಿಂಗ್ ಎಂದು ....ಮರೀ ಬೇಡ ಕಣೋ ಮಹಾಗಾಂಭೀರ್ಯ .... ಮಹಾಗಾಯವಾದೀತು. ಹುಡುಗೀರು ಎಂದರೇನು ತಿಳಿದಿದ್ದೀ. ಕಹಿ ಕಷಾಯ ಅಂದುಕೋ........"

ಹ್ಯಾಂಲೆಟ್ : "ನಿನ್ನ ನೀತಿ ಸಾಕು. ನಿನಗೆ ನ್ಯಾಷನಲ್ ಪ್ರೈಜ್ ಬೇಕಿದ್ದರೆ ಮಂದಾರ ನನ್ನ ಜೊತೆ ಮಾಡು. ಇನ್ನು ಇಲ್ಲೇ ಡಿವಿಷನಲ್ ಲೆವೆಲ್‌ನಲ್ಲೂ ನಮ್ಮ ಕಾಲೇಜ್ ಉದುರಿಹೋಗುತ್ತದೆ. ಏನಂತಿ."

ರಾಜೀವ "...... ಮಗನೇ, ಹಾಗಾದರೆ ಹೋಗಿ ಮಂದಾರನ್ನ ಕೇಳು. ಸೇರಿಕೋ ಅವಳ ಜೊತೆ."

ಹ್ಯಾಲೆಂಟ್ ಅದು ಸಾಧ್ಯವಿಲ್ಲ ಎಂದು ಹೇಳಿಬಿಟ್ಟ. ಹೃದಯದ ಮೇಲು ಭಾವನೆಗಳ ಅರಿವೇ ಇಲ್ಲದ ರಾಜೀವನಿಗೆ ಅದೆಲ್ಲಾ ತಿಳಿಯಲಾರದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ.

ಅಷ್ಟರಲ್ಲಿ ದಿಗಂತದಿಂದ ಪ್ರಭಾ ಮೂಡಿದಳು. ಆದಿನ ಅವಳ ಮನಸ್ಸಿನಲ್ಲಿ ಚಿಂತೆ ತಾಂಡವವಾಡುತ್ತಿತ್ತು. ವಸಂತಾಳನ್ನು ಮನೆಗೆ ಕಳುಹಿಸಿ ಪ್ರಭಾ ಹ್ಯಾಂಲೆಟ್ಟನ್ನು ಹುಡುಕಿಕೊಂಡು ಬಂದು, ರಾಜೀವನ ಜೊತೆ ಅವನಿರುವುದನ್ನು ಕಂಡು ಹೌದೋ ಅಲ್ಲವೋ ಎನ್ನುವಷ್ಟು ಮೆಲುನಗೆ ಮೂಡಿತು–ಮುಖದಲ್ಲಿ ಮತ್ತೆ ಬೆಣ್ಣೆತಿಂದ ಬಾವುಗನಂತೆ ಏನೂ ಅರಿಯದ ಮುಗ್ಧಭಾವ ತಲೆದೋರಿತು. ಹತ್ತಿರಕ್ಕೇ ಬಂದ ಅವಳು ಹ್ಯಾಲೆಂಟ್‌ನ ಬಳಿ ನಿಂತು,

"ಕ್ಷಮಿಸು, ಶಿವು ಸ್ವಲ್ಪ ಮಾತಾಡುವುದಿದೆ ನಿನ್ನಬಳಿ........"

"ವಿತ್ ಪ್ಲೆಷರ್........" ಎಂದ ಹ್ಯಾಂಲೆಟ್ ಅವಳ ಹಿಂದೆಯೇ ಹೊರಟ. ಸ್ವಲ್ಪ ದೂರ ದಲ್ಲಿ ನಿಂತ ಅವಳು

"ಶಿವು ನೀನು ಈ ಕಾಂಟೆಸ್ಟ್ ಗೆಲ್ಲಲು ಒಂದೇಮಾರ್ಗ. ಅದೆಂದರೆ ಮಂದಾರನ ಜೊತೆ ಸೇರುವುದು." ಎಂದಳು

"ನಾನು ... ಹೇಗೆ ಕೇಳಲಿ?"

"ನೀನು ಕೇಳುವುದು ಬೇಡ. ನಾನೇ ಕೇಳುತ್ತೇನೆ. ಇನ್ನೊಂದು ವಿಷಯವೆಂದರೆ ನನ್ನ ನಿನ್ನ ನಡುವೆ ಇರಲಿ– ನೀನು ಗೆಲ್ಲಲು ಮಂದಾರನ ಗಾಯನ ಏನೂ ಸಹಾಯ ಮಾಡೋದಿಲ್ಲ. ವಸಂತ, ರಮಾ ಇವರ ಅರ್ಥ ಯೋಗ್ಯತೆಯೂ ಅವಳಿಗಿಲ್ಲ. ಆದರೆ ಅವರ ಪಾರ್ಟ್‌ನರ್‌ಗಳಿದಾರಲ್ಲ ಅವು ಕಾಗೆ ಗಳು. ಆದರೂ ಒಂದು ಅಪಾಯ ಇದ್ದೇ ಇದೆ. ವಸಂತಾ ಪ್ರಿನ್ಸಿಪಾಲರ ಬಳಿಗೆ ಹೋಗಿ ದ್ದಳು. ಏನು ಹೇಳಿದಳೋ ಏನೋ ಅವಳ ಸೆಲೆಕ್ಷನ್ ಅಪ್ರೂವ್ಡ್ ಎಂದಿದ್ದಾರೆ ಪ್ರಿನ್ಸಿ ಪಾಲರು. ನೀನೀಗ ಅವರಬಳಿಗೆ ಹೋಗಿ..."

"ಹೋಗಿದ್ದೆ . . .."

"ಒಂದು ಕೆಲಸ ಮಾಡು. ಈ ಲಿರಿಕ್ ಇದೆಯಲ್ಲ ಇದರಲ್ಲಿ ಎರಡೇ ಚರಣ ಇದೆ. ಮೂರನೇ ಚರಣವೊಂದು ಇರಲೇಬೇಕು. ಅದೇನು ಅವರಿಂದ ತಿಳಿದುಕೋ. ಅಲ್ಲದೆ ಇದನ್ನು ಬರೆದ ಕವಿಯಾರು? ಅವನ ಕಾವ್ಯ ಧ್ವನಿ ಏನು ಅನ್ನೋದನ್ನ ಸ್ವಲ್ಪಚರ್ಚಿಸು." ಪ್ರಭಾ, ನಿನಗೇಗೊತ್ತು ಪ್ರಿನ್ಸಿಪಾಲ್ ಹೇಗೆ, ಮಾತಾಡ್ತಾರೆ ಅಂತ, ನನಗಂತೂ ಅರ್ಥವೇ ಆಗಿಲ್ಲ ಆಸಾಮಿ.........."

"ಇರಬಹುದು ಆದರೆ ನನಗೆ ತಿಳಿದ ಹಾಗೆ ಅವರು ದೇಶದ ಪ್ರಮುಖ ಕೆಮಿಸ್ಟ್ರಿ ತಜ್ಞರಲ್ಲೊಬ್ಬರು. ಅಮೇರಿಕಾಕ್ಕೆ ಹೋದರೆ ಅಲ್ಲಿ ಯಾವ ಲ್ಯಾಬ್ ಆದರೂ ಅವರನ್ನು ವಾರಕ್ಕೆ 6000 ಡಾಲರ್ ಸಂಬಳಕ್ಕೆ ತೆಗೆದು ಕೊಳ್ಳುತ್ತದೆ. ಆದರೆ ಈತ ಇಲ್ಲಿ– ಈ ಕೊಂಪೆಯಲ್ಲಿ, ಏಕಿದ್ದಾನೋ ಏನೋ ? ಹೋಗಿ ಕೇಳು. ನಾನೇ ಮಂದಾರನನ್ನ ಕಳಿಸಿ ನಿನ್ನ ಕೇಳೋ ಹಾಗೆ ಮಾಡ್ತೇನೆ." ಪ್ರಭಾ ಮುಂದುವರಿದು ಹೇಳಿದಳು, "ಅಲ್ಲ ಶಿವು, ಅವಳಹತ್ರ ಏಷ್ಟುಕ್ಲೋಸಾಗಿದ್ದೀ, ಕೇಳೋ ಕಾಗೋದಿಲ್ವೇ ?"

ಹ್ಯಾಂಲೆಟ್ ಹೇಳಿದ " ಆದನ್ನ ಹೇಳೋದು ಹೇಗೆ ಪ್ರಭಾ? ಅದು ಮಾತಿಗೆ ಮೀರಿದ್ದು."

ಹ್ಯಾಂಲೆಟ್ ಅಲ್ಲಿಂದಲೇ ಟಾಟಾ ಹೇಳಿ ಪ್ರಿನ್ಸಿಪಾಲರ ಬಳಿಗೆ ಹೋಗಿ ಬಿಟ್ಟ.

ಪ್ರಭಾ ರಾಜೀವನ ಬಳಿಗೆ ಹೋಗಿ

"ರಾಜು ನಿನಗೆ ಮಂದಾರನ್ನ ಕಂಡ್ರೆ ಏಕೆ ಏನು ಎಂಥ ದ್ವೇಷ." ಎಂದು ಕೇಳಿದಳು. ರಾಜೀವ ಪ್ರಭಾಗೆ ತನ್ನ ನಿಲುವನ್ನು ವಿವರಿ ಸಿದ. ಅವನಿಗೆ ಪ್ರಭಾ ಬಾಲ್ಯದಿಂದಲೂ ಗೆಳತಿ. ಆದರೆ ಒಂದು ಮಾತು ಮಾತ್ರ ಖಂಡಿತ, ಅವಳ ಕಂಠ ಮಧುರ. ಆದರೆ ರಮಾ, ವಸಂತಾ ಇವರಿಗೆ ಹೋಲಿಸಿದರೆ ಅವಳು ಏನೇನೂ ಅಲ್ಲ. ಕಾಲೇಜು ಗೆಲ್ಲ ಬೇಕಾದರೆ ನಿಷ್ಪಕ್ಷಪಾತದ ಆಯ್ಕೆ ನಡೆಯ ಬೇಕು. ಅಷ್ಟೇ ಹೊರತು ಮಂದಾರ ಅವ ನಿಗೆ ಅತ್ಯಂತ ಆಪ್ತಳೂ, ಇಷ್ಟಳೂ ಆದ

ಹುಡುಗಿ. ಅವಳ ಯಶಸ್ಸು ಅವನಿಗೂ ಇಷ್ಟ.

ಪ್ರಭಾ ಮೆಲುವಾಗಿ ನಕ್ಕು ಹೇಳಿದಳು.

"ಹಾಗಾದರೆ ಒಂದು ಮಾತು. ಈಗ ಅವಳು ತುಂಬಾ ಇಂಪ್ರೆಸ್ಡಾಗಿದ್ದಾಳೆ. ಅವಳು ಹೇಳುವ ಗೀತೆ ಕೇಳು ನಿನಗೆ ಇಷ್ಟವಾದರೆ ಒಪ್ಪಿಕೋ.... "

"ಅವಳನ್ನೆಲ್ಲಿ ಹುಡುಕಲು ಹೋಗಲಿ ?"

"ಆಕ್ವೆಡಕ್ಟ್ ಇದೆಯಲ್ಲಾ ಅಲ್ಲಿಗೆ ನೀನು ಹೋಗು ಅವಳು ನಿನಗಾಗಿ ಕಾದಿರುತ್ತಾಳೆ."

* * *

ಪ್ರಿನ್ಸಿಪಾಲರು ಒಳಕೋಣೆಯಲ್ಲಿ ಕುಳಿತಿದ್ದರು. ಹ್ಯಾಂಲೆಟ್ 'ಸಾರ್' ಎಂದು ಕೂಗಿದ್ದು ಕೇಳಿಸಿತು. "ನಾನು ಬಹಳ busy ಆಗಿದ್ದೇನೆ. ಆಮೇಲೆ ಬಾ" ಎಂದರು "ಇದು ಅತಿ ತುರ್ತು ಸಾರ್" ಎಂದ ಹ್ಯಾಂಲೆಟ್.

"ಒಳಕ್ಕೆ ಬಾ. ಹೊರಬಾಗಿಲ ಬೋಲ್ಟ್ ಹಾಕು," ಪ್ರಿನ್ಸಿಪಾಲರು ಮೇಜಿನ ಮೇಲೆ ಏನನ್ನೋ ಗೀಚುತ್ತಿದ್ದರು.

"ವೆಲ್" ಎಂದರು.

"ಸರ್ ಈ ಗೀತೆಯಲ್ಲಿ ಎರಡೇ ಸ್ಟ್ಯಾನ್ಜಾ ಇವೆ. ಮೂರನೆಯದು ಮಿಸ್ಸಿಂಗ್. ಅಲ್ಲದೆ ಇದರ ಕವಿ ಯಾರು ? ಅವನ ಕಾವ್ಯದ ಧೋರಣೆ ಏನು ? ಈ ಕವನದ ಅಂತರಂಗ ಧ್ವನಿ ಯಾವುದು ?"

"ಅದೆಲ್ಲಾ ಏಕೆ ಬೇಕು ?"

"ಒಬ್ಬ ಗಾಯಕ ಯಶಸ್ವಿಯಾಗಲು ಇದೆಲ್ಲಾ ಅಗತ್ಯ. ಗಾಯನದಲ್ಲಿ ಹೇಗೋ ಇದೆಲ್ಲಾ ಸರಿಹೋಗುತ್ತದೆ. ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಕಾಲೇಜು ಗೆಲ್ಲಬೇಕಿದ್ದರೆ ಇದೆಲ್ಲಾ ನನಗೆ ತಿಳಿದಿರಬೇಕು."

"ಹಾಗಾದರೆ ಕೇಳು, ಈ ಕವನ ಬರೆದವನು ವಾಸು. ಕೆ. ಬಬ್ಬೂರ್ಕರ್. ಈಗ ನೈಜೀರಿಯಾದಲ್ಲಿ ಸೈಂಟಿಸ್ಟ್ ಆಗಿದ್ದಾನೆ. ಅವನದೊಂದು ದುರಂತ ಅವನು ಬಯಸಿದ ಹುಡುಗಿ ಅವನಿಗೆ ಸಿಗಲಿಲ್ಲ. ಅವನು ಕೆಮಿಸ್ಟ್ರಿಯಲ್ಲಿ ಎಕ್ಸ್‌ಪರ್ಟ್ ಆಗಿ ಇಂಟರ್‌ಫೆರಾನ್ಸ್ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾನೆ. ಫಾರ್ ಎಕ್ಸಾಂಪಲ್........ಅದೇಕೆ ನಿನಗೆ ಇದೊಂದು ಗುಟ್ಟು. ಇನ್ನು ಸ್ವಲ್ಪ ಹೊತ್ತಿನಲ್ಲಿ ಅವನಿಲ್ಲಿ ಇರುತ್ತಾನೆ. ನನ್ನ ಹತ್ತಿರ ಏನೋ ಕನ್ಸಲ್ಟ್ ಮಾಡಬೇಕಂತೆ. ವಿಷಾದದ ಒಳದನಿಯನ್ನುಳ್ಳ ಒಂದು ಅಪೂರ್ಣ ಕವನ ಇದು. ಇನ್ನು ಹೊರಡು. ಈಗ ಟೈಂ...... ಹೌದು ನಾನೂ ಅರ್ಜೆಂಟಾಗಿ ಹೋಗಿ ಇನ್ನು ಐವತ್ತು ನಿಮಿಷಗಳೊಳಗಾಗಿ ಹಿಂದಿರುಗಬೇಕು."

ಹ್ಯಾಂಲೆಟ್ ಅತೃಪ್ತನಾಗಿ ಹೊರಬಿದ್ದ. ಅವನು ರಸ್ತೆಯ ಕೊನೆಯನ್ನು ಮುಟ್ಟುವುದರೊಳಗಾಗಿ ಪ್ರಿನ್ಸಿಪಾಲರ ಮನೆಯ ಮುಂದೆ ಕಾರ್ ಬಂದುನಿಂತಿತು.

* * *

—ರಮ್ಯ

ಮಡಿವಾಳದ ಸಂತೆ ಬಿಡಾರದಲ್ಲಿ ನನಗೆ ರಾತ್ರಿ ನಿದ್ರೆ ಬರಲಿಲ್ಲ. ಅಂದು ಮಧ್ಯಾಹ್ನ ತಿಂದಿದ್ದ ಜೋಳದ ಭಕ್ರಿಯಿಂದಲೋ ಅಥವಾ ರಾತ್ರಿ ತಿಂದಿದ್ದ ಅವಲಕ್ಕಿಯಿಂದಲೋ– ಕಣ್ಣು ಮುಚ್ಚಿದರೆ ಚಿತ್ರಗುಪ್ತ ನನ್ನ ಮೇಲೆ ಕೂತು ನನ್ನ ಹೊಟ್ಟೆ ತುಯ್ಯುವ ಹಾಗೆ ಕನಸು ಬೀಳ್ತಾ ಇತ್ತು. ನಿದ್ರೆ ಬರಲಿಲ್ಲ. ವೀರಭದ್ರು ಚಿಕ್ಕಪ್ಪ ಗೊರ್ಕೆ ಹೊಡೆಯುತ್ತಿದ್ದವರು ಥಟ್ಟಂತ ಎದ್ದು ಕೂತ್ರು. ಅವರಿಗೆ ಬೇಳುಕುಟಿಕಿರ ಬೇಕು – ಅಂದುಕೊಂಡೆ. ಒಂದು ಕಡ್ಡಿ ಗೀಚಿ ಬೀಡಿಹಚ್ಚಿಕೊಂಡರು. ಇನ್ನೊಂದು ಕಡ್ಡಿಹಚ್ಚಿ ಬೆಳಕಿನಲ್ಲಿ ಸುತ್ತ ನೋಡಿದರು.

"ಈರಭದ್ರು ಎಲ್ಲಿ ?" ಅಂತ ಕೇಳಿದರು.
ನನಗೇನೂ ಕಾಣಲಿಲ್ಲ.
ಮತ್ತೊಂದು ಕಡ್ಡಿ ಹಚ್ಚಿದರು.
ರಾಜ- ಗೊರ್ಕೆ ಹೊಡೀತಿದ್ದ. ಈರಭದ್ರು ಚಂದಿ ನಾಪತ್ತೆಯಾಗಿದ್ದರು.

"ಬನ್ನಿ ಹೊರಗಡೆ ನೋಡೋಣ" ಅಂತ ಚಿಕ್ಕಪ್ಪ ಎದ್ದರು. ವರಾಂಡಕ್ಕೆ ಬಂದ್ವು, ಅಲ್ಲಲ್ಲಿ ಸಂತೆ ದೀಪಗಳು ಬಂಡಿಗಳು ಉರಿಯುತಿದ್ವು. ಕೆಲವು ಗಾಡಿಗಳು ನಿಂತಿದ್ವು. ಗಂಜಳ ಸಗಣಿಗಳ ಕಂಪು ಮೂಗಿಗೆ ಬಡೀತಿತ್ತು.

"ಊರಾಚೆ ಬೈಲಾಟ ನಡೀತಿದೆ – ಆಗೋ ಕೇಳಿ– ಆಡ್ತಾಇದಾನೆ ಪದಾನ ಈಹೋ" ಅಂದ್ರು ಚಿಕ್ಕಪ್ಪ.

ನಾನು ಸೂಕ್ಷ್ಮವಾಗಿ ಆಲಿಸಿದೆ. ದೂರದಲ್ಲಿ ತಮಟೆಶಬ್ದ – ಜೊತೆಗೆ ಯಾರೋ ಹಾಡುವ ಹಾಗೆ ಕೇಳಿಸಿತು. ಹಳ್ಳಿಯವರ ಕಿವಿಯ ಪವರ್‌ನ ನೋಡಿ ಮೆಚ್ಚಬೇಕಾಯ್ತು.

"ಆಗೋ ನೋಡಿ ದೂರದಲ್ಲಿ ಬಂದಾಗಡೆ. ಅಂಗೇ ನೋಡ್ತಿರಿ ನಮ್ಮೀರಭದ್ರು ಬಾಯಿನ ಬೀಡಿಬೆಂಕಿ ಕಾಣುತ್ತದೆ" ಅಂದರು.

ನನಗೇನು ಕಾಣಸಲಿಲ್ಲ. ಎರಡು ನಿಮಿಷದಲ್ಲೇ ನಮ್ಮ ಹತ್ತಿರ ಬಂದು ಈರಭದ್ರು ಸಿಗರೇಟ್ ಬಿಸಾಡಿದ. ಚಂದಿ ಸಿಗರೇಟ್ ಕೈಲಿ ಹಿಡಿದಿದ್ದ.

"ಕ್ಯಾತೇದೇವರ ಗುಡಿ ಮುಂದೆ ಬೈಲ್ ನಾಟ್ಕ ನಡೀತಿದೆ- ಮದನಕಾಯುರಾಜಚರಿತ್ರೆ ನಿದ್ರೆ ಬರ್ಲಿಲ್ಲಾಂದ – ಚಂದಿ. ಹೆಂಗೇ ಹೋಗಿದ್ವು." ಅಂದ ವೀರಭದ್ರು.

"ಹೌದಯ್ಯ, ಹೊಟ್ಟೇಲೆಲ್ಲಾ ಏನೇನೋ ಓಡಾಡ್ತಿತ್ತು. ಒಂಥರಾ– ನಿದ್ದೆ ಬರ್ಲಿಲ್ಲಾ." ಅಂದ ಚಂದಿ.

ಪುನಃ ವರಾಂಡದಲ್ಲಿ ಮಲಗಿದೆವು. ಸುಮಾರು ಒಂದು ಸಾವಿರ ಸೊಳ್ಳೆಗಳು ನನ್ನನ್ನ ಅನಾಮತ್ತು ಎತ್ತಿ ಆಕಾಶಕ್ಕೆ ಎತ್ತಿ ಹೋದ ಹಾಗಾಯ್ತು. ಎಲ್ಲವೂ ಒಟ್ಟಿಗೆ ಹಾಡಿಕೊಂಡು ನನ್ನ ಕಳೇಬರಾನ ಭೂಮಿಗೆ ಹಾಕಾಯ್ತು. ಕಣ್ಣುಬಿಟ್ಟೆ – ಬೆಳಕಾಗಿತ್ತು. ಬಾವಿಯ ಹತ್ರ ನಮಗೆಲ್ಲರಿಗೂ ಸ್ನಾನವಾಯ್ತು. ವೀರಭದ್ರು ಒಂದು ಮುತ್ತುಗದ ಎಲೆ ಪಟ್ಣ ತಂದಿದ್ದ.

"ಇಲ್ಲಿ ನಮಗೆ ತಿಂಡಿಯೊ ದೊಸ್ರುದಾರೆ-ಕೇಳೆಮ್ಮ್ಯಂತ. ಬೇಗ್ಗೆ ದೋಸೆ ಉಪ್ಪಿಟ್ಟು ಮಾಡ್ತಾರೆ, ದೋಸೆ ಚಟ್ನಿ ತಂದೆ" ಅನ್ನುತ್ತಾ ಟಿಕ್ಟನ್ನು ಬಿಚ್ಚಿದ.

ನಾಷ್ಟಾ ಮುಗಿಸಿ- ಯೂ ಟೇಕ್ ದಿ ಹೈ ರೋಡ್, ಐ ಟೇಕ್ ದಿ ಲೋರೋಡ್ ಅನ್ನೋಹಾಗೆ ವೀಣಮ್ಮ ಚಿಕ್ಕಪ್ಪನವ್ರನ್ನ ಬೀಳ್ಕೊಟ್ಟ್ರು. ನಾನು ರಾಜ ಚಂದಿ ಹೈ ರೋಡ್ ಹಿಡಿದೆವು. ಕೆಂಚಮ್ಮನ ದೋಸೆ ಚಟ್ನಿ ಕೊಟ್ಟ . ಎನರ್ಜಿಯಿಂದ ಸುಮಾರು ಮೂರು ಕಿ. ಮೀ. ದೂರ ಸತತವಾಗಿ ತುಳಿದಿದ್ದೆವು. ಚಂದಿ ಇಳಿದ ರಾಜನೂ ಇಳಿದ, ನಾನೂ – ಎಸ್- ಇಳಿದೆ. ಚಂದಿ ಇಳಿದ ಕಡೆ –"ತಳವಾರ ಅಂಗಡಿ"- ಅಂತ ಬರೆದಿದ್ದ ಕಲ್ಲು ನೆಟ್ಟಿತ್ತು. .

ಅದಕ್ಕೆ ಅಂದು ಕೆಂಪು ಹಾರ ಹಾಕಿ ಅರಿಶಿನ ಕುಂಕುಮ ಬಳಿದಿತ್ತು.

"ಏನೋ ವಿಶೇಷವಿರಬೇಕ್ರೋ ತಳವಾರ್ರಂಗಡೀಲಿ" ಅಂದ ಚಂದಿ.

"ಮಾರಮ್ಮನಿಗ ನರಬಲೀಗೆ ಜನ ಹುಡುಕ್ತಾ ಇದ್ದಾರಂತೆ- ಹೋಗ್ತಿಯೇನು ?" ಅಂತ ರಾಜ ಕೇಳಿದ.

"ಹೋಗೋ ಚಂದಿ" ಅಂದೆ ನಾನು.

ಆ ಸಮಯಕ್ಕೆ ಸರಿಯಾಗಿ ರಸ್ತೆಯ ಪಕ್ಕದ ಸಣ್ಣ ದಾರಿಯಿಂದ ಜನ ತುಂಬಿದ ಎರಡು ಎತ್ತಿನ ಗಾಡಿಗಳು ಬಂದು ದೊಡ್ಡ ರಸ್ತೆ ದಾಟಿ ತಳವಾರಂಗಡಿ ಕಡೆ ತಿರುಗಿದವು. ಒಂದು ಗಾಡಿಯಲ್ಲಿ ಸುಮಾರು 15 –20 ವರ್ಷದ ಇಬ್ಬರು ಯುವಕರಿಗೆ ಹಾರ ಹಾಕಿ ಕೂರಿಸಿದ್ದರು.

"ಯಜ್ಞ ಪಶುಗಳು" ಅಂದ ಚಂದಿ.

ನನ್ನ ವಯಸ್ಸಿನಲ್ಲಿ ಒಂದು ಥ್ರಿಲ್ ಆಯ್ತು. ರಾಜ ಗಾಡಿಗಳನ್ನು ನಿಲ್ಲಿಸಿ – ಎಲ್ಲಿಗೆ ಹೋಗ್ತಿರಾ ? ಅಂತ ವಿಚಾರಿಸಿದ.

"ತಳವಾರಂಗಡೀಲಿ ಇವತ್ತು ಹರ್ಕೆ ಸಿಡಿ ಆಡ್ತಾರೆ." ಅಂದರು. ಚಂದಿಗೆ ಆಹ್ವಾನ ಬೇಕಾಗಿರಲಿಲ್ಲ.

ತಳವಾರಂಗಡಿ-ರಸ್ತೆಯಿಂದ ಸುಮಾರು ಎರಡು ಕಿಲೋಮೀಟರ್ ದೂರವಿತ್ತು. ಕೇವಲ 15–20ಮನೆಗಳ ಊರು. ಮುಂದೆ ಊರು, ಮುಂದೆ ಮೂರು ಗೂಡುಗಳು. ಗೂಡುಗಳ ಮಧ್ಯೆ ಒಂದು ಮಂಟಪ ಮಂಟಪದ ಎದುರು ಸಿಡಿಕಂಬ. ಕಂಬದ ಮೇಲು ತುದಿಯಲ್ಲಿ ತಿರುಗುವ ಮರದ ಅಡ್ಡ ತೊಲೆ. ತೊಲೆಯ ಒಂದು ತುದಿಯಲ್ಲಿ ಒಂದು ಸಲಾಕಿ. ಮೂರು ಗೂಡುಗಳಲ್ಲಿ ಗಣಪತಿ, ದುರ್ಗಿ. ಕ್ಯಾತೇ ದೇವರುಗಳನ್ನ ಕೂಡಿಸಿದ್ದರು–ಅಥವಾ ನಿಲ್ಲಿಸಿದ್ದರು.

ಮೊದಲ ಮೂರು ದೇವರುಗಳಿಗೂ ಪೂಜೆಗಳಾದವು. ತಳವಾರಂಗಡಿ ದುರ್ಗಿ ಹಿಂದೆ ನಾನ್–ವೆಜ್ ದೇವತೆಯಾಗಿದ್ದಳಂತೆ. ಈಚೆಗೆ ಪ್ಯೂರ್ ವೆಜಿಟೇರಿಯನ್ ಆಗಿ, ಯಾವುದೂ ಪ್ರಾಣಿ ಹತ್ಯೆ ನಡೆಯೋ ಹಾಗಿಲ್ಲವಂತೆ. ಆದ್ರೂ ಗುಟ್ಟಿನಲ್ಲಿ ಗೂಡಿನ ಹಿಂಬದಿಯಲ್ಲಿ ಕೋಳಿ ಕಡಿಸ್ಕೊತ್ತಾಳಂತೆ-ಕೆಲವು ನಾನ್ ವೆಜ್ ಬ್ರಾಂಬ್ರಂಗೆ ! ನಾವಲ್ಲಿದ್ದಾಗ್ಲೇ ಹಿಂಬದಿಯಿಂದ ಬಂದು ಕೋಳಿಯ ಲಾಸ್ಟ್‌ಪೋಸ್ಟ್ ಕೇಳಿಬಂತು.

ನಾವು ಗಾಡಿಯಲ್ಲಿ ನೋಡಿದ ಇಬ್ಬರು ಯಜ್ಞ ಪಶುಗಳನ್ನ ಮಂಟಪದಲ್ಲಿ ಕೂಡಿಸಿ

ಭಾವಿನೀರಿನಿಂದ ಅಭಿಷೇಕ ಮಾಡಿ ದುರ್ಗಿ ಗೂಡಿನೊಳಕ್ಕೆ ಕರ್ಕೊಂಡು ಹೋದರು. ಕೇವಲ-ಸಬ್‌ಕೋ ಸನ್ಮತಿ ದೇ ಭಗವಾನ್ ಅನ್ನುವುದರೊಳಗಾಗಿ ಯುವಕರ ಬೆನ್ನಿಗೆ ಕಬ್ಬಿಣದ ಕೊಕ್ಕೆಗಳನ್ನ ಚುಚ್ಚಿಸಿ ಹೊರಗೆ ಕರ್ಕೊಂಡು ಬಂದರು. ಅವರ ಮುಖದಲ್ಲಿ ಯಾವ ನೋವೂ ಕಾಣಲಿಲ್ಲ.

"ಅದೇನೋ ರಸ ಹಚ್ತಾರಂತೆ-ನೋವೂ ಆಗೊಲ್ಲ-ರಕ್ತಾನೂ ಬರೋಲ್ಲವಂತೆ." ಅಂದ ಚಂದಿ.

"ಹಾಗಾದ್ರೆ ನನ್ನ ದವಡೆ ಹಲ್ಲನ್ನ ಇಲ್ಲೇ ಕೀಳಿಸ್ಲೇನಯ್ಯಾ ?" ಅಂತ ರಾಜ ಕೇಳಿದ.

ಬೇಡ-ಅದನ್ನ ನಾನು ತೆಗಿತೀನಿ" ಅಂದ ಚಂದಿ. ಸರದಿಯ ಮೇಲೆ ಯುವಕರನ್ನ ನೋಡಿ ಸಿಡಿಕೋಲೆಯ ಸಲಾಕಿಗೆ ಸಿಕ್ಕಿಸಿ ಏಳು ಸುತ್ತು ಸುತ್ತಿಸಿದರು. ಇಳಿಸಿದ ಮೇಲೆ ಕೊಕ್ಕೆ ಎಳೆದು ಘಾಯಕ್ಕೆ ಬೂದಿ ಬಳಿದರು. ಹರಕೆ ಪೂರೈಸಿತು.

"ನಮ್ಮ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಾ ಈ ತರಹದ ಒಬ್ಬೊಬ್ಬ ಸಿಡಿ ವೀರಣ್ಣನ ಸರ್ಜನನ್ನ ಅಪಾಯಿಂಟ್ ಮಾಡ್ಕಬೇಕ್ರೊ" [ಬೇಕ್ರೋ"] ಅಂದ ರಾಜ.

ಸಿಡಿ ಪೂಜೆ ಎಲ್ಲಾ ಮುಗಿದ ಮೇಲೆ ತಳವಾರಂಗಡಿ ಶಾನುಭೋಗರು ವೆಂಕಭಟ್ಟರ ಮನೇಲಿ ಊಟವಾಯ್ತು. ತಳವಾರಂಗಡೀಲಿ ಸಾಧಾರಣ ಮೂರು ವರ್ಷಕ್ಕೊಂದು ಬಾರಿ ಸಿಡಿ ಆಗುತ್ತೆ. ಅರ್ಜೆಂಟ್ ಹರಕೆ ಇದ್ದಾಗ ಮಧ್ಯದಲ್ಲೂ ಆಗುತ್ತೆ. ಸುಮಾರು ಏಳುನೂರು ವರ್ಷಗಳಿಂದ ನಡೀತಿದೆ-ಅಂದರು.

"ನೀವಿಲ್ಲಿ ಎಷ್ಟು ವರ್ಷದಿಂದ ಇದ್ದೀರಿ." ಚಂದಿ ಕೇಳಿದ.

"ಏಳು ತಲೆಮಾರಿನಿಂದ" ಅಂದರು.

"ಬ್ರಾಹ್ಮಣರೂ ಸಿಡಿ ಹಾಕ್ಕೊತ್ತಾರೋ?" ರಾಜ ಕೇಳಿದ.

"ತುಂಬ ಅಪರೂಪ. ನಮ್ಮ ತಂದೆ ಕಾಲದಲ್ಲಿ ಆಗಿತ್ತಂತೆ. ನಾನು ನೋಡಿಲ್ಲ" ಅಂದರು.

"ಏಕೆ ಕೇಳಿದೆ?"

"ಬ್ರಾಹ್ಮಣರು ದ್ವಿಜರಾದ್ದರಿಂದ ಅವರಿಗೆ ನಿತ್ಯ ಕರ್ಮಗಳಿರುತ್ವೆ. ಈ ರೀತಿ ದೇಹದಂಡನೆಯ ಆವಶ್ಯವಿಲ್ಲ ಅಂದರು.

"ಎಲ್ಲರಿಗೂ ನಿತ್ಯ ಕರ್ಮಗಳನ್ನ ಭೋದಿಸಿ ಪುನೀತರನ್ನಾಗಿ ಮಾಡಬಹುದಿತ್ತಲ್ಲ-ಬ್ರಾಹ್ಮಣರು ?" ಅಂದ ರಾಜ.

"ಅದು ಹೇಗೆ ಸ್ವಾಮಿ ಸಾಧ್ಯ ? ಚಾತುರ್ವರ್ಣ ಮಯಾಸೃಷ್ಟ್ಯ ಅಂತ ಕೃಷ್ಣ ಪರಮಾತ್ಮನೇ ಹೇಳಿರೋವಾಗ ಬ್ರಾಹ್ಮಣರು ಹೇಗೆ ಸ್ವಾಮಿ ಎಲ್ಲರಿಗೂ ವೇದ ಉಪನಿಷತ್ತುಗಳನ್ನ ಭೋದಿಸೋದು. ?"

"ಲ್ರೋ. ಕೈಲಾಸು ಹೇಳಿದ್ದು ಕರೆಕ್ಟ್ ಕಣ್ರೊ-ದಧಿಕ್ರಾವುಣ್ಣೋ ಅಕಾರುಷಂ ಸುರಭಿನೋ ಮುಖಾಕರತ್- ಅಂತ ಹೇಳಿಕೊಂಡು ಮುಖಕ್ಷೌರ ಮಾಡಿಸಿಕೊಂಡ್ರೆ ಸ್ನಾನವಿಲ್ದೆ ಇದ್ರೂ ಬ್ರಾಹ್ಮಣಿಕೆಗೆ ಲೋಪ ಬರೋದಿಲ್ಲಾಂತ !" ಅಂದ ಚಂದಿ.

ಚಂದಿ ಒಟ್ಟ ಕೈಲಾಸಂ ಜೀಸಣಿಗೆ.

ವೆಂಕಭಟ್ರು ಕಕ್ಕಾಬಿಕ್ಕಿಯಾದ್ರು

"ಯಾವ ಕೈಲಾಸು ಸಾರ್ ? ವೇದಬ್ರಹ್ಮ ಶ್ರೀ ಕೈಲಾಸನಾಥ ಶಾಸ್ತ್ರಿಗಳೇ ?ಅಂತ ಕೇಳಿದರು.

"ಅವರಿಗಿಂತಲೂ ಭ್ರಷ್ಟರು—ಈ ಕೈಲಾಸಂ ಅನ್ನಿ. ಆದರೆ ಒಂದು – ಭಟ್ರೀ-ಬ್ರಾಹ್ಮಣ ರ್ರೋ: ವೇದ ಉಪನಿಷತ್ತುಗಳನ್ನ ತಮ್ಮ ದೊಬ್ಬರದೇ ಸ್ವತ್ತು ಅಂತ ಯಾವಾಗ ನಿರ್ಧರಿಸಿದರೋ ಆಗ ತಮ್ಮ ಚಿತೇನೂ ತಾವೇ ಹತ್ತಿಸಿಕೊಂಡ್ರಲ್ವೆ ? ಈಗ ನೋಡಿ ಬ್ರಾಹ್ಮಣರು ಅನುಭವಿಸುತ್ತಾ ಇರೋದು. ಇತರರೆಲ್ರೂ ಅವರ ಬೆಂಚ್ ತಗೀತಿದ್ದಾರೆ" ಅಂದ ರಾಜ.

ವೆಂಕಭಟ್ಟರ ಮನೇಲಿ ಊಟಮಾಡಿ ಅವ ರನ್ನ ಈ ರೀತಿ ಕೀಟಲೆಮಾಡೋದು ನನಗೆ ಸರಿಬೀಳಲಿಲ್ಲ, ನಾನು ಎದ್ದೆ. ವೆಂಕಭಟ್ಟರಿಗೆ ನಮಸ್ಕಾರ ಹೇಳಿ ಹೊರಗೆ ಬಂದು ನನ್ನ ಪಡಪಗಳನ್ನೆತ್ತಿಕೊಂಡೆ.

"ಓಹೋ!" ಅನ್ನುತ್ತ ರಾಜ ಚಂದಿ ಎದ್ದರು.

ತಳವಾರಂಗಡಿ ಬಿಟ್ಟು ಸುಮಾರು ಒಂದು ಕಿ. ಮೀ. ದಾಟಿದ ಮೇಲೆ ಚಂದಿ-

"ಶುದ್ಧ ಚಿಕನ್ ಹಾರ್ಟೆಡ್ ಫೆಲೋನಮ್ಮ!" ಅಂದ.

"ರೈಟ್ !" ಅಂದ ರಾಜ- ಮಬಟ್ಟಾಳ.

—ಕೇಫ"

ಆರ್ಥಿಕ ಚಿಂತೆ

ಭೂಮಿಯ ಚಲನೆ ಮತ್ತು ಸಂಬಳ

ಮೊನ್ನೆ ಸಂಜೆ ಬೋರ್‌ಹೊಡೆದು, ಸಿನಿಮಾಕ್ಕಾದರೂ ಹೋಗೋಣವೆಂದು ಕೊಂಡು ಪರ್ಸ್ ತೆಗೆದೆ. ತಿಂಗಳ ಕೊನೆ ಯಾದ್ದರಿಂದಲೋ ಏನೋ ಅದು ತೆಳ್ಳಗೆ ಹುಳ್ಳಿಪರೆಯು ಹಾಗಿತ್ತು, ಆದರೂ ಅದರ ಜಬರ್ದಸ್ತೆಷ್ಟು ? ಸಿನಿಮಾಕ್ಕೆ ವೀಟೋ ಮಾಡಿತು. ಕುರ್ಚಿಯಲ್ಲಿ ಕುಸಿದು ಕುಳಿತು, ಬೆಳಗಿನ ಪೇಪರನ್ನೆತ್ತಿಕೊಂಡೆ.

ಆದರಲ್ಲೊಂದು ಲೇಖನ ಭೂಮಿಯ ದೈನಂದಿನ ಚಲನೆಯ ವೇಗ ಕಡಿಮೆಯಾಗು ತ್ತಿದೆ ಎಂದು ಹೇಳಿತ್ತು. ವಿಜ್ಞಾನಿಗಳ ಅಪಾರ ಶ್ರಮ, ಪ್ರತಿಭೆಗಳನ್ನು ನಾನು ಮೆಚ್ಚಿಕೊಳ್ಳುವ ತಂಟೆಗೆ ಹೋಗಲಿಲ್ಲ. ನನ್ನ ಪರ್ಸಿನ ದಪ್ಪ ಕುಗ್ಗಿದ್ದರಿಂದ ಕಸವಿಸಿ ಗೊಂಡಿದ್ದ ನಾನು ವೈಜ್ಞಾನಿಕರಿಗೆ ಭೂಮಿಯ ಬಗೆಗಿರುವ ಅಕ್ಕರೆ, ಆಸೆಗಳನ್ನು ಮರೆತೆ. ಭೂಮಿಯ ಚಲನೆಯ ವೇಗ ಕುಗ್ಗುತ್ತಾ ಹೋದರೆ ಹವಾಮಾನ, ಋತು ಮಾನ ಪರಿಸರ ಇವುಗಳ ಮೇಲಾಗುವ ಪರಿಣಾಮವನ್ನು ಚಿಂತಿಸಲಾರಂಭಿಸಿದೆ.

ಭೂಮಿಯು ತನ್ನ ಕಕ್ಷದ ಸುತ್ತಲೂ ತಿರುಗುವುದಕ್ಕೆ ತೆಗೆದುಕೊಳ್ಳುವ ಕಾಲವು ಒಂದು ವರ್ಷಕ್ಕೋ ಹತ್ತುವರ್ಷಕ್ಕೋ, ಸೆಕೆಂಡಿನ ಅಥವಾ ಮಿಲಿ ಸೆಕೆಂಡಿನ ಹತ್ತು

ಅಥವಾ ನೂರರಲ್ಲೊಂದದಷ್ಟು ಕಡಮೆಯಾಗುತ್ತಿದೆ ಎಂದು ಆ ಲೇಖನ (ಬಹುಶಃ) ನಿಷ್ಕೃಷ್ಟ ಪ್ರಯೋಗಗಳ ಆಧಾರದ ಬಲದಿಂದ ಘೋಷಿಸಿತ್ತು. ಇದಕ್ಕೇಕೆ ನಾವು ಪರ್ವಾಡಬೇಕು ಎಂದು ಕೇಳೀರಿ. ಸಂಬಳ ತೆಗೆದುಕೊಳ್ಳುವ ಸರ್ವರೂ ಇದರಿಂದಾಗಿ ಪರ್ವಾಡಲೇಬೇಕು ಎಂಬುದು ನನ್ನ ಉತ್ತರ.

ಮಸಲಾ ಈ ಭೂಮಿ ತನ್ನ ಕಕ್ಷದ ಸುತ್ತಲೂ ತಿರುಗಲು ಒಂದು ಗಂಟೆ ಹೆಚ್ಚಿಗೆ ತೆಗೆದುಕೊಳ್ಳುತ್ತದೆ ಎಂದಿಟ್ಟುಕೊಳ್ಳೋಣ. ಆಗ ದಿನಕ್ಕೆ 25 ಗಂಟೆಗಳಾಗುತ್ತವೆ ಅಥವಾ ಪ್ರತಿಯೊಂದು ಗಂಟೆಗೂ 62.5 ನಿಮಿಷಗಳಾಗುತ್ತವೆ. ಅಥವಾ ಒಂದು ಸೆಕೆಂಡೇ ತನ್ನ ಹಲವಾರು ದಶಮಾಂಶಗಳಷ್ಟು ಹೆಚ್ಚಾಗುತ್ತದೆ.

ಆಗ ನೀವು ದಿನಕ್ಕೆ ಎಂಟೇಗಂಟೆ ಕೆಲಸ ಮಾಡುತ್ತಿದ್ದೇನೆ ಎಂದುಕೊಂಡು, ಹೆಚ್ಚುಕಾಲ ಕೆಲಸಮಾಡುತ್ತೀರಿ ನಿಮ್ಮ ಸಂಬಳ ಇದ್ದಷ್ಟೇ ಇರುತ್ತದೆ ನೀವು ಚಿಕ್ಕವರಾಗಿಯೇ ಇದ್ದರೂ ನಿಮ್ಮ ತಲೆಗೂದಲು ಬೇಗ ನರೆಯುತ್ತದೆ.

ತಕ್ಷಣ ಒಂದು ಪ್ರಯೋಗ ಮಾಡಿದೆ. ಎದ್ದು ಹೋಗಿ ಕನ್ನಡಿಯಲ್ಲಿ ನೋಡಿಕೊಂಡೆ. ನನ್ನ ಕೂದಲು ಕೊಂಚವೇ ಕೊಂಚ ಬಿಳುಪಿನ ಕಡೆಗೆ ವಾಲುತ್ತಿತ್ತು.

ಭೂಮಿಯ ದೈನಂದಿನ ಚಲನೆಯ ವೇಗ ಹೆಚ್ಚಿದರೆ ಅನುಕೂಲವಾಗಬಹುದೇ ಎಂದು ಚಿಂತಿಸಿದೆ. ಅದೂ ತಪ್ಪು. ಆಗ ದಿನದ ಅವಧಿ ಕಡಮೆಯಾಗಿ, ಆಫೀಸ್ ವೇಳೆಯೂ ಕಡಮೆಯಾಗುತ್ತದಲ್ಲವೇ ? ಮೋಸಹೋಗದಿರಿ. ಆಗ ನೀವು ಪ್ರತಿವರ್ಷ ಓಡಾಡಲು ಹೆಚ್ಚು ವೆಚ್ಚ ಮಾಡಬೇಕು, ಋತುಗಳ ಅವಧಿ ಕಡಮೆಯಾದರೂ ಅವು ಮತ್ತೆ ಬೇಗ ಬೇಗ ಬರುತ್ತವೆ. ಭೂಮಿ ಮೊದಲಿನ ವೇಗದಲ್ಲೇ ಸುತ್ತುತ್ತಿದ್ದರೆ ಉಣ್ಣೆ ಬಟ್ಟೆ, ಐಸ್ ಕ್ಯಾಂಡಿ ಇತ್ಯಾದಿಗಳಿಗೆ ಆಗುವ ಖರ್ಚಿಗಿಂತ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಏಕೆಂದರೆ ಋತುಗಳು ಬೇಗ ಮರಳುತ್ತದೆ. ನೀವು ಬಲು ಬೇಗ ರಿಟೈರಾಗುತ್ತೀರಿ. ಶತಾಯುಷಿಗಳಾಗುವ ಛಾನ್ಸ್ ಹೆಚ್ಚುತ್ತದೆ. ಏನಿದರ ಅರ್ಥ, ಯೋಚಿಸಿ. ಬಹುಕಾಲ ಬಾಳಿ ಕಮ್ಮಿ ದುಡಿಯುತ್ತೀರಿ.

ಹಾಳಾಗಿ ಬೆಂಕಿ ಬಿದ್ದು ಹೋಗಲಿ, ಈ ಭೂಮಿ ತಿರುಗದೇ ಹಾಗೇ ನಿಂತು ಬಿಡಲಿ ಎಂದುಕೊಂಡೆ. ಆಗಲೂ ನಷ್ಟ ನಿಮಗೇ. ದೈನಂದಿನ ಭ್ರಮಣೆ ನಿಂತರೆ, ಒಂದು ವರ್ಷಕ್ಕೆ ಒಂದೇ ದಿನವಾಗುತ್ತದೆ. ಮುಂದಿನ ಸಂಬಳ ಬರುವುದಕ್ಕೆ ಇನ್ನೂ (ಈಗಿನ) ಮೂವತ್ತು ವರ್ಷ ಕಾಯಬೇಕಾಗುತ್ತದೆ. ಯೋಚಿಸಿ ತಲೆ ಕೆಟ್ಟುಹೋಯಿತು. ಬಕರನ ಹಾಗೆ ಕಣ್ಣುಕಣ್ಣು ಬಿಡುತ್ತಾ ಕಿಟಕಿಯಲ್ಲಿ ನೋಡಿದೆ.

ಮುಳುಗುವ ಸೂರ್ಯನ ಹೊಂಬಣ್ಣದ ಕಿರಣಗಳು ಎಲ್ಲೆಡೆ ಹಬ್ಬಿದ್ದವು. ಯಾವ ಅನಾಹುತದಸಂಭವವೂ ಇಲ್ಲವೆನಿಸಿತು. ಭೂಮಿಯ ಚಲನೆಯ ವೇಗದ ಬಗೆಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದು ಸೂರ್ಯ ನನಗೆ ಧೈರ್ಯ ತುಂಬಿದ.

—ಗೋಪಾಲ್

"ನಗುವು ಸಹಜ ಧರ್ಮ : ನಗಿಸುವುದು ಪರಧರ್ಮ !
ನಗುವ ಕೇಳುತ, ನಗುವುದತಿಶಯದ ಧರ್ಮ ॥
ನಗುವ, ನಗಿಸುವ, ನಗಿಸಿ ನಗುತ ಬಾಳುವ ವರವ !
ಮಿಗೆ ನೀನು ಬೇಡಿಕೊಳೊ— ಮಂಕುತಿಮ್ಮ ॥"

ಶುಭಾಶಯಗಳೊಂದಿಗೆ—

ಸಣ್ಣ ಕೈಗಾರಿಕೋದ್ಯಮಿ ಯಾರು ?

"ಸಣ್ಣ ಕೈಗಾರಿಕೋದ್ಯಮಿ ಹಲವು ರುಂಡಗಳು ನೀಡಿದ ಅನಿಮಂತಿ. ಕೇವಲ ಹೋರಾಟಕ್ಕಾಗಿ ಹೋರಾಡುವ ಕಾರ್ಮಿಕ ನಾಯಕನಿಗೆ, ಈತ ದಲಿತರನ್ನು ಶೋಷಿಸುವ ಕ್ರೂರರಾಕ್ಷಸ. ದೊಡ್ಡ ಕೈಗಾರಿಕೆಗಳ ಗ್ರಾಹಕರಿಗೆ, ಸಣ್ಣ ಕೈಗಾರಿಕೆ ಒದಗಿಸುವ ಸಾಮಗ್ರಿಗಳಿಗೆ ಹಣ ಸಂದಾಯ ಮಾಡುವ ಜರೂರು ಇಲ್ಲದಿರುವುದರಿಂದ ಈತ ಸುಲಭವಾಗಿ ಸಿಗುವ ಸಂಪನ್ಮೂಲ. ಲಂಚಮಂತನಾದ ಸರ್ಕಾರಿ ಅಧಿಕಾರಿಗೆ ಈತ ಯಾವಾಗಲೂ ಸಿದ್ಧವಾಗಿರುವ ಕಾಮಧೇನು. ಸರ್ಕಾರಿ ಯೋಜನಾ ಅಧಿಕಾರಿಗಳಿಗೆ ಸಣ್ಣ ಕೈಗಾರಿಕೋದ್ಯಮಿ ನಿರುದ್ಯೋಗ ನಿವಾರಕ ತಾರಕ ಮಾತ್ರ. ಹಣ ಒದಗಿಸುವ ಬ್ಯಾಂಕ್ ಅಧಿಕಾರಿಗಳಿಗೆ, ಈತ ತನ್ನ ಉದ್ಯಮದ ಹಣಕಾಸನ್ನು ಸ್ವಂತಕ್ಕಾಗಿ ಬಳಸುವ ಕಿಲಾಡಿ. ಕಳೆದ ಒಂಭತ್ತು ವರ್ಷಗಳಿಂದ ಸಣ್ಣ ಕೈಗಾರಿಕೋದ್ಯಮವನ್ನು ನಡೆಸಿ ಇನ್ನೂ ಉಳಿದಿರುವ ನನ್ನ ಅನಿಸಿಕೆಯಲ್ಲಿ ಇಂದಿನ ಒಬ್ಬ ಸಣ್ಣ ಕೈಗಾರಿಕೋದ್ಯಮಿ ಅತ್ಯಂತ ಚತುರತೆ ಹಾಗೂ ಸಮಯ ಸ್ಫೂರ್ತಿಯನ್ನು ಪಡೆದ ಸರ್ಕಸ್ ಆಟಗಾರ."

—ಎನ್. ನರಸಿಂಹನ್